ಸಂಪುಟ: 01 ಸಂಚಿಕೆ: 55 ಪುಟ: 04 ಬೆಲೆ: 02 ಬುಧವಾರ ಆಗಸ್ಟ್ 05 2026 ಮೊ: 7411699198/7406928404

# ಅಜಾತ ಶತ್ರು

ಜನರ ನುಡಿ.... ಕೊಪ್ಪಳದಿಂದ ಏಕಕಾಲಕ್ಕೆ ಪ್ರಕಟ ಸತ್ಯದ ಧ್ವನಿ...

ಕನ್ನಡ ದಿನ ಪತ್ರಿಕೆ

ಪ್ರದೀಪಕುಮಾರ
ಸಂಪಾದಕರು

Volume:01 Issue: 55 Pages:04 Price:02 WEDNESDAY AUGUST 05 2026 RNI NO: KNKAN/26/A4008 E-mail:ajathashathru2026@gmail.com




## ಸತ್ಯವಾಣಿ ಕಟೋಕ್ತಿ



ಜಗತ್ತಿನ ಪ್ರತಿಯೊಬ್ಬರೂ ಅವರವರ ಕರ್ಮಗಳಿಗೆ ಫಲ ಉಂಡರೆ,ಕೆಲವರು ಮಾತ್ರ ಬೇರೆಯವರ ಪಾಪ ಕರ್ಮಗಳಿಗೆ ಅನಾಯಾಸವಾಗಿ ಫಲವನ್ನು ಅನುಭವಿಸುವುದು ದೊಡ್ಡ ದುರುಂತಗಳಲ್ಲೊಂದು.

ವಾಣಿ ಭಂಡಾರಿ.




# ದಾಖಲೆ ಕೊಡದ ಮನೆಗಳಿಗೆ ಗೃಹಜ್ಯೋತಿ ಯೋಜನೆಯ ಉಚಿತ ವಿದ್ಯುತ್ ಇಲ್ಲ

ಬೆಂಗಳೂರು: ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಗೃಹಜ್ಯೋತಿ ಯೋಜನೆಯಡಿ ಉಚಿತ ವಿದ್ಯುತ್ ಪಡೆಯುತ್ತಿರುವ ಗ್ರಾಹಕರಿಗೆ ಇಂಧನ ಇಲಾಖೆ ಶಾಕಿಂಗ್ ಸುದ್ದಿ ನೀಡಿದೆ. ರಾಜ್ಯಾದ್ಯಂತ ನಡೆಯುತ್ತಿರುವ ಮನೆ-ಮನೆ ಸಮೀಕ್ಷೆಯಲ್ಲಿ ಅಗತ್ಯ ದಾಖಲೆಗಳು ಮತ್ತು ಮಾಹಿತಿಯನ್ನು ನೀಡದಿದ್ದರೆ ಫಲಾನುಭವಿಗಳು ಯೋಜನೆಯ ವ್ಯಾಪ್ತಿಯಿಂದ ಹೊರಗುಳಿಯುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಯಾವುದೇ ಅರ್ಹ ಗ್ರಾಹಕರು ಯೋಜನೆಯ ಸೌಲಭ್ಯದಿಂದ ವಂಚಿತರಾಗದಂತೆ ವಿಶೇಷ ಶಿಬಿರಗಳನ್ನು ಆಯೋಜಿಸುವ ಪ್ರಸ್ತಾವನೆಯನ್ನೂ ಸರ್ಕಾರದ ಮುಂದಿಡಲಾಗಿದೆ.ಇಂಧನ ಇಲಾಖೆಯ ಅಂಕಿ-ಅಂಶಗಳ ಪ್ರಕಾರ ರಾಜ್ಯದಲ್ಲಿ ಗೃಹಜ್ಯೋತಿ ಯೋಜನೆಯಡಿ 1,65,32,652 ಗೃಹ ವಿದ್ಯುತ್




ಗ್ರಾಹಕರು ನೋಂದಾಯಿಸಿಕೊಂಡಿದ್ದಾರೆ. ಇವರಲ್ಲಿ ಆಗಸ್ಟ್ 2, 2026ರವರೆಗೆ 91,50,081 ಫಲಾನುಭವಿಗಳ ಮನೆಗಳಿಗೆ ಮೀಟ-ರ್ ರೀಡರ್‌ಗಳು ಭೇಟಿ ನೀಡಿ ಸಮೀಕ್ಷೆ ಪೂರ್ಣಗೊಳಿಸಿದ್ದು, ಇನ್ನೂ 73,82,571 ಫಲಾನುಭವಿಗಳ ಮಾಹಿತಿ ಸಂಗ್ರಹವಾಗಿಲ್ಲ.

ಮನೆ-ಮನೆ ಸಮೀಕ್ಷೆಯ ಉದ್ದೇಶ ಯೋಜನೆಯ ಫಲಾನುಭವಿಗಳ ವಿವರಗಳನ್ನು ನವೀಕರಿಸುವುದು ಮತ್ತು ಯೋಜನೆಯ ಲಾಭ ಸರಿಯಾದ ಫಲಾನುಭವಿಗಳಿಗೆ ತಲುಪುತ್ತಿರುವುದನ್ನು ಖಚಿತಪಡಿಸಿಕೊಳ್ಳುವುದಾಗಿದೆ. ಸಮೀಕ್ಷೆ ವೇಳೆ ಗ್ರಾಹಕರು ಮನೆಯಲ್ಲಿ ಇಲ್ಲದಿದ್ದರೆ ಅಥವಾ ಮಾಹಿತಿ ನೀಡಲು ನಿರಾಕ-ರಿಸಿದರೆ ಅವರು ಯೋಜನೆಯ ಪಟ್ಟಿಯಿಂದ ಹೊರಗುಳಿಯುವ ಸಾಧ್ಯತೆ ಇದೆ ಎಂಬ ಎಚ್ಚರಿಕೆಯನ್ನು ಇಲಾಖೆ ನೀಡಿದೆ. ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ರಾಜ್ಯದ ಎಲ್ಲಾ ಎಸ್ಕಾಂ ಕಚೇರಿಗಳಲ್ಲಿ ವಿಶೇಷ ಸಮೀಕ್ಷಾ ಶಿಬಿರಗಳನ್ನು ನಡೆಸಲು ಸರ್ಕಾರದ ಅನುಮತಿ ಕೋರಲಾಗಿದೆ. ಈ ಶಿಬಿರಗಳಲ್ಲಿ ಫಲಾನುಭವಿಗಳು ಸ್ವತಃ ಹಾಜರಾಗಿ ತಮ ದಾಖಲೆಗಳು ಮತ್ತು ಮಾಹಿತಿಯನ್ನು ಸಲ್ಲಿಸಬಹುದಾಗಿದೆ. ಅಲ್ಲದೆ ಮೊದಲ ಬಾರಿ ಮನೆಗೆ ಭೇಟಿ ನೀಡಿದಾಗ ಫಲಾನುಭವಿಗಳು ಸಿಗದಿದ್ದರೆ ಅಥವಾ ಮಾಹಿತಿ

2ನೇ ಪುಟಕ್ಕೆ

## ಶಾಸಕ ರಾಘವೇಂದ್ರ ಹಿಟ್ನಾಳಗೆ ಸಿಗದ ಸಚಿವ ಸ್ಥಾನ: ಕೊಪ್ಪಳದಲ್ಲಿ ಆಕ್ರೋಶ, ಪ್ರತಿಭಟನೆ

ಅ.ಶ. ಸುದ್ದಿ ಕೊಪ್ಪಳ

ಕೊಪ್ಪಳ: ಕೊಪ್ಪಳದ ಹ್ಯಾಟ್ರಿಕ್ ಶಾಸಕ ಕೆ.ರಾಘವೇಂದ್ರ ಹಿಟ್ನಾಳ ಅವರಿಗೆ ಸಚಿವ ಸ್ಥಾನ ಸಿಗದ್ದಕ್ಕೆ ಅವರ ಬೆಂಬಲಿಗರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಅವರು ಸೋಮವಾರ ಇಲ್ಲಿನ ಅಶೋಕ ವೃತ್ತದಲ್ಲಿ ಹಿಟ್ನಾಳ ಬೆಂಬಲಿಗರು ಪ್ರತಿಭಟನೆ ನಡೆಸಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ಪಕ್ಷದ ಅಧ್ಯಕ್ಷ ಬಿ.ಕೆ. ಹರಿಪ್ರಸಾದ ಹಾಗೂ ಸಿದ್ದರಾಮಯ್ಯ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ನಂತರ ಅಶೋಕ ವೃತ್ತದಲ್ಲಿ ಟೈರ್ ಗೆ ಬೆಂಕಿ ಹಚ್ಚಿ ಬಾಯಿ ಬಡೆದುಕೊಂಡು ಆಕ್ರೋಶ ವ್ಯಕ್ತಪಡಿಸಿದರು. ಕೊಪ್ಪಳ ಕ್ಷೇತ್ರಕ್ಕೆ ಸಚಿವ ಸ್ಥಾನ ತಪ್ಪಲು ಸಿದ್ದರಾಮಯ್ಯ ಕಾರಣ. ರಾಘವೇಂದ್ರ ಹಿಟ್ನಾಳ ಸತತ ಮೂರು ಬಾರಿ ಹ್ಯಾಟ್ರಿಕ್



ಶಾಸಕರಾಗಿದ್ದರು ಸಚಿವ ಸ್ಥಾನ ಕೊಟ್ಟಿಲ್ಲ ಯಾಕೆ ಎಂದು ಪ್ರಶ್ನಿಸಿ ಆಕ್ರೋಶ ವ್ಯಕ್ತಪಡಿಸಿದರು. ಕಾಂಗ್ರೆಸ್ ಹೈಕಮಾಂಡ್ ಕೂಡಲೇ ರಾಘವೇಂದ್ರ ಹಿಟ್ನಾಳ್ ಅವರಿಗೆ ಸಚಿವ ಸ್ಥಾನ ನೀಡುವಂತೆ ಆಗ್ರಹಿಸಿದರು.

ಈ ಸಂದರ್ಭದಲ್ಲಿ ರಾಘವೇಂದ್ರ ಹಿಟ್ನಾಳ್ ಬೆಂಬಲಿಗರಾದ ಅಜ್ಜಪ್ಪ ಸ್ವಾಮಿ ಚೆನ್ನ ಒಡೆಯರ ಮಠ, ವೀರಣ್ಣ ಸಂಡೂರು, ಶರಣಪ್ಪ ಚಂದನ ಕಟ್ಟಿ, ಅರುಣ ಅಪ್ಪು ಶೆಟ್ಟಿ, ಚೆನ್ನಪ್ಪ ಕೋಟ್ಯಾಳ, ಎಂಡಿ ರಫಿ, ಕಬೀರ್ ಸಿಂದೋಗಿ, ಗವಿ ಜಂತಗಲ್, ರವಿಕುಮಾರ್, ಸಿ.ವಿ ಹಳ್ಳಿ, ಮುತ್ತುಸ್ವಾಮಿ ನರೇಗಲ್ ಮಠ ಸೇರಿದಂತೆ ಅಪಾರ ಬೆಂಬಲಿಗರು ಉಪಸ್ಥಿತರಿದ್ದರು

## ನಾಳೆ ಶಿವರಾಜ್ ಎಸ್.ತಂಗಡಗಿಯವರಿಂದ ಪ್ರಗತಿ ಪರಿಶೀಲನಾ ಸಭೆ

ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ಸಚಿವರಾದ ಶಿವರಾಜ್ ಎಸ್.ತಂಗಡಗಿ ಅವರ ಅಧ್ಯಕ್ಷತೆಯಲ್ಲಿ ಆಗಸ್ಟ್ 6 ರಂದು ಸಂಜೆ 4 ಗಂಟೆಗೆ ಜಿಲ್ಲಾ ಪಂಚಾಯತ್‌ನ ಜೆ.ಹೆಚ್ ಪಟೇಲ್ ಸಭಾಂಗಣದಲ್ಲಿ ಪ್ರಗತಿ ಪರಿಶೀಲನಾ ಸಭೆಯನ್ನು ಏರ್ಪಡಿಸಲಾಗಿದೆ. ಸಭೆಯಲ್ಲಿ ಋತುಮಾನದ ಪರಿಸ್ಥಿತಿಗಳು ಮತ್ತು ಹವಾಮಾನ ಮುನ್ಸೂಚನೆ, ಬೆಳೆ ಪರಿಸ್ಥಿತಿ, ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಕುಡಿಯುವ ನೀರು ಪೂರೈಕೆಯ ಸ್ಥಿತಿಗತಿ, ಮೇವು ಲಭ್ಯತೆ,**

ಟಾಸ್ಕ್ ಫೋರ್ಸ್ ಸಮಿತಿಗಳ ಪ್ರಗತಿ, ವಿಬಿ-ಜಿ ರಾಮ್ ಜಿ ಯೋಜನೆ ಪ್ರಗತಿ ಕುರಿತು, ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ನಿವೇಶನ ಹಂಚಿಕೆ ಬಗ್ಗೆ ಭೂ ಲಭ್ಯತೆ ಕುರಿತು, ಗೃಹ ಜ್ಯೋತಿ ಪರಿಶೀಲನೆ, ಗೃಹಲಕ್ಷ್ಮೀ ಮರಣ ಹೊಂದಿದ ಪ್ರಕರಣದ ಕುರಿತು ಪರೀಶಿಲನೆ, ಎಸ್.ಐ.ಆರ್ ನಲ್ಲಿ ಸಾಧಿಸಿದ ಪ್ರಗತಿ ವರದಿ ಕುರಿತು, ಜಾತಿ ಪ್ರಮಾಣ ಪತ್ರ ಹಂಚಿಕೆ ಕುರಿತು ಹಾಗೂ ಇತರೆ ವಿಷಯಗಳು ಬಗ್ಗೆ ಸಚಿವರು ಪ್ರಗತಿ ಪರಿಶೀಲನೆ ನಡೆಸುವರು.



ಆದ್ದರಿಂದ ಸಂಬಂಧಿಸಿದ ಎಲ್ಲ ಇಲಾಖೆಗಳ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾ-ರಿಗಳು ಅಗತ್ಯ ಮಾಹಿತಿಯೊಂದಿಗೆ ಖುದ್ದಾಗಿ ಸಭೆಗೆ ಹಾಜರಾಗಬೇಕು ಎಂದು ಅಪರ ಜಿಲ್ಲಾಧಿಕಾರಿ

## ಹಿಟ್ನಾಳ್ಗೆ ಸಿಗದ ಸಚಿವ ಸ್ಥಾನ: ಕೊಪ್ಪಳ ಬ್ಲಾಕ್ ಕಾಂಗ್ರೆಸ್ ಸಮಿತಿ ಪದಾಧಿಕಾರಿಗಳ ರಾಜೀನಾಮೆ ನೀಡಿ ಆಕ್ರೋಶ ವ್ಯಕ್ತಪಡಿಸಿದರು

ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ಕಾಂಗ್ರೆಸ್ ಶಾಸಕ ರಾಘವೇಂದ್ರ ಹಿಟ್ನಾಳ ಅವರಿಗೆ ಸಚಿವ ಸ್ಥಾನ ಕೈ ತಪ್ಪಿದ ಹಿನ್ನೆಲೆಯಲ್ಲಿ ಕೊಪ್ಪಳ ಬ್ಲಾಕ್ ಕಾಂಗ್ರೆಸ್ ಸಮಿತಿ ಪದಾಧಿಕಾರಿಗಳು ಸಾಮೂಹಿಕ ರಾಜೀನಾಮೆ ಸಲ್ಲಿಸಿದ್ದಾರೆ. ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಹಾಗೂ ಡಿಸಿಸಿ ಅಧ್ಯಕ್ಷ ಅಮರೇಗೌಡ ಬಯ್ಯಾಪೂರ್ ಗೆ ರಾಜೀನಾಮೆ ಸಲ್ಲಿಸಿದ್ದಾರೆ.**



ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೃಷ್ಣಾರಡ್ಡಿ ಗಲಬಿ ಸೇರಿ ಏಳು ಜನರು ರಾಜೀನಾಮೆ ನೀಡಿದ್ದಾರೆ. ರಾಬಕೊವಿ ಒಕ್ಕೂಟದ ನಿರ್ದೇಶಕರಾಗಿರುವ ಕೃಷ್ಣಾರಡ್ಡಿ ಗಲಬಿ ಅವರು ಶಾಸಕ ರಾಘವೇಂದ್ರ ಹಿಟ್ನಾಳ ಅವರ ಪರಮಾಪ್ತರಾಗಿದ್ದಾರೆ. ಸೋಮವಾರವಷ್ಟೇ ಕೊಪ್ಪಳದಲ್ಲಿ ಶಾಸಕರ ಬೆಂಬಲಿಗರು ಹಿಟ್ನಾಳಗೆ ಸಚಿವ ಸ್ಥಾನಕ್ಕೆ ಪ್ರತಿಭಟನೆ ನಡೆಸಿದ್ದರು. ಇದೀಗ ಮಂಗಳವಾರ ಏಳು ಜನರು ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿ ಆಕ್ರೋಶ ವ್ಯಕ್ತಪಡಿಸಿದರು.

## ತಾಲೂಕು ದಂಡಾಧಿಕಾರಿಗಳಿಗೆ ಮನವಿ, ರೈಸ್ ಮಿಲ್ ಗಳಿಂದ ನಮ್ಮನ್ನು ರಕ್ಷಿಸಿ ಎಂದು ಅಳಲು



ಅ.ಶ. ಸುದ್ದಿ ಕಾರಟಗಿ

**ಕಾರಟಗಿ: ರೈಸ್ ಮಿಲ್‌ಗಳಿಂದ ಗ್ರಾಮಸ್ಥರಿಗೆ ಕಾಯಿಲೆ ಭೀತಿ**

**ರೈಸ್ ಮಿಲ್‌ಗಳಿಂದ ಹೊರಬರುವ ಹೊಗೆ** ಹಾಗೂ ತ್ಯಾಜ್ಯದಿಂದ ಗ್ರಾಮಸ್ಥರ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತಿದ್ದು, ಪರಿಸರ ಮಾಲಿನ್ಯವೂ ಹೆಚ್ಚುತ್ತಿದೆ ಎಂದು ಆರೋಪಿಸಿ, ಮಾರುತಿ ಕ್ಯಾಂಪ್ ಗ್ರಾಮಸ್ಥರು ತಾಲೂಕು ದಂಡಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.



ಇತ್ತೀಚೆಗಷ್ಟೇ ಜುಲೈ 18ರಂದು ಮರ್ಲಾನಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ನವನಗರದ ವಿಜಯಲಕ್ಷ್ಮಿ ಆಗ್ರೋ ಫುಡ್,ವೆಂಕಟೇಶ್ವರ ಇಂಡಸ್ಟ್ರೀಸ್, ಲಕ್ಷ್ಮೀ ಶ್ರೀನಿವಾಸ ರೈಸ್ ಮಿಲ್ ಗಳಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ನೋಟಿಸ್ ಜಾರಿ ಮಾಡಲಾಗಿತ್ತು. ನಿಯಮ ಉಲ್ಲಂಘಿಸಿ ಪರಿಸರ ಮಾಲಿನ್ಯ ಮಾಡುತ್ತಿರುವ ಬಗ್ಗೆ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಕೆ ಸಹ ನೀಡಿತ್ತು. ಸುಮಾರು ವರ್ಷಗಳಿಂದ ಮಾರುತಿ ಕ್ಯಾಂಪಿಗೆ ಸಂಪರ್ಕ ಕಲ್ಪಿಸುವ ರೈತರ ಕಾಲುವೆಗೆ ರೈಸ್ ಮಿಲ್ಗಳ ತ್ಯಾಜ್ಯವನ್ನು ಬಿಡುತ್ತಿದ್ದು ಇದ-ರಿಂದಾಗಿ ಕೆಳಭಾಗದಲ್ಲಿರುವ ಗ್ರಾಮದ ಜನರಿಗೆ ತೊಂದರೆಯಾಗುತ್ತಿರುವ ಬಗ್ಗೆ ಸಾರ್ವಜನಿಕರು ಆಕ್ರೋಶವನ್ನು ಹಾಕಿದ್ದಾರೆ.

ರೈಸ್ ಮಿಲ್ಗಳು ಹೊರಬಿಡುವ ಹೊಗೆ ಮತ್ತು ತ್ಯಾಜ್ಯವನ್ನು ನಿಯಂತ್ರಿಸಲು ತಕ್ಷಣ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಗ್ರಾಮಸ್ಥರು ತಹಸೀಲ್ದಾರರಿಗೆ ಮನವಿಯನ್ನು ಸಲ್ಲಿಸಿದರು ಈ ಸಂದರ್ಭದಲ್ಲಿ ಗ್ರಾಮದ ಭೀಮಣ್ಣ ಮರಿಯಮ್ಮ ಕಾಂತಮ್ಮ ವೆಂಕಟಮ್ಮ ಗಂಗಮ್ಮ ಇತರರು ಇದ್ದರು

# ಕಿನ್ನಾಳ ಪ್ರಾ.ಆ.ಕೇಂದ್ರದಲ್ಲಿ ವಿಶ್ವ ಸ್ತನ್ಯಪಾನ ಸಪ್ತಾಹ ಜಾಗೃತಿ ಕಾರ್ಯಕ್ರಮ

ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ತಾಲೂಕಾ ಆರೋಗ್ಯಾಧಿಕಾರಿಗಳ ಕಛೇರಿ, ಕೊಪ್ಪಳ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ ಕಿನ್ನಾಳ ಇವರ ಸಂಯುಕ್ತಾಶ್ರಯದಲ್ಲಿ ಮಂಗಳವಾರದಂದು ವಿಶ್ವ ಸ್ತನ್ಯಪಾನ ಸಪ್ತಾಹ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.**

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿ ಡಾ. ಪ್ರಕಾಶ್ ವಿ., ಪ್ರತಿ ವರ್ಷ ಆಗಸ್ಟ್ ಮೊದಲನೇ ವಾರ (1-7ನೇ ದಿನ)ದಲ್ಲಿ "ವಿಶ್ವ ಸ್ತನ್ಯಪಾನ ಸಪ್ತಾಹ" ಜಾಗೃತಿ ಕಾರ್ಯಕ್ರಮ ಆಚರಿಸಲಾಗುತ್ತದೆ. ಇದರ ಉದ್ದೇಶ ತಾಯಿಯ ಎದೆಹಾಲು ಶಿಶುವಿಗೆ ನೀಡುವ ವಿಧಾನಗಳ ಬಗ್ಗೆ ಗರ್ಭಿಣಿ, ಬಾಣಂತಿಯರಿಗೆ ಹಾಗೂ ಸಾರ್ವಜನಿಕರಿಗೆ ಅರಿವು ಮೂಡಿಸುವುದಾಗಿದೆ. "ತಾಯಿಯ ಹಾಲು ಮಗುವಿನ ಮೊದಲ ಹಕ್ಕು-



ಆರೋಗ್ಯಕರ ಬದುಕಿನ ಭದ್ರ ಅಡಿಪಾಯ" ಎಂಬ ಈ ವರ್ಷದ ಘೋಷವಾಕ್ಯದೊಂದಿಗೆ ಕಾರ್ಯಕ್ರಮವನ್ನು ಆಚರಿಸಲಾಗುತ್ತದೆ. ಹೆ-ರಿಗೆಯಾದ ಅರ್ಧ ಗಂಟೆಯಲ್ಲಿ ತಾಯಿಯ ಎದೆಹಾಲು ನೀಡಬೇಕು, ಹೆರಿಗೆಯಾದ ಮೂರು ದಿನದಲ್ಲಿ ಬರುವ ಹಳದಿ ಹಾಲಿನಲ್ಲಿ "ಕೊಲಸ್ಟ್ರಾಂ" ಎಂಬ ರೋಗನಿರೋಧಕ ಶಕ್ತಿ ಹೆಚ್ಚಿರುತ್ತದೆ.

ಆರು ತಿಂಗಳವರೆಗೆ ಕೇವಲ ತಾಯಿಯ ಎದೆಹಾಲನ್ನು ಮಾತ್ರ ನೀಡಬೇಕು ಬೇರೇನೂ ನೀಡಬಾರದು. "ಎದೆಹಾಲು ನೀಡುವುದ-ರಿಂದ ಮಗುವಿನ ಸರ್ವತೋಮುಖ ಬೆಳವಣಿಗೆ ಹೊಂದಲು ಸಾಧ್ಯವಾಗುತ್ತದೆ" ಮಗುವಿಗೆ ನೀಡುವ ಮೊದಲ ಲಸಿಕೆ ತಾಯಿಯ ಎದೆಹಾಲು. ಎದೆಹಾಲು ಕುಡಿಸುವುದರಿಂದ ತಾಯಿ ಮತ್ತು ಮಗುವಿಗೆ ಬಹಳಷ್ಟು ಉಪಯುಕ್ತವಾಗುತ್ತದೆ. ತಾಯಿ ಮತ್ತು ಮಗುವಿನ ಬಾಂಧವ್ಯ ಹೆಚ್ಚಾಗುತ್ತದೆ. ತಾಯಿಯ ಎದೆಹಾಲು ನೀಡುವುದರಿಂದ ಸ್ತನ ಕ್ಯಾನ್ಸರ್ ಬರುವುದಿಲ್ಲ.

ಗರ್ಭಧಾರಣೆ ಮುಂದೂಡುತ್ತದೆ. ಮಗುವಿಗೆ ಸರಳವಾಗಿ ಜೀರ್ಣವಾಗುತ್ತದೆ. ಎದೆಹಾಲು ಕಾಯಿಸುವ ಅಗತ್ಯವಿಲ್ಲ, ಮಗುವಿಗೆ ಯಾವುದೇ ಕಾರಣಕ್ಕೂ ಬಾಟಲಿ ಹಾಲನ್ನು ನೀಡಬಾರದು, ಒಂದು ವೇಳೆ ಬಾಟಲಿ ಹಾಲನ್ನು ನೀಡಿದರೆ ಮಗುವಿಗೆ ಅತಿಸಾರ ಭೇದಿ ಉಂಟಾಗುವ ಸಾಧ್ಯತೆ ಇರುತ್ತದೆ. ಪ್ರತಿ ತಾಯಿಯು ತನ್ನ ಮಗುವಿಗೆ ದಿನಕ್ಕೆ 10-12 ಬಾರಿ ಎದೆಹಾಲು ನೀಡಬೇಕು. ತಾಯಿಯ ಎದೆಹಾಲು ನೀಡುವುದರಿಂದ ಯಾವುದೇ ರೀತಿಯ ಅಪೌಷ್ಠಿಕತೆ, ನಿಮೋನಿಯಾ ಹಾಗೂ ಇತರೆ ಖಾಯಿಲೆಗಳು ಹರಡದಂತೆ ರಕ್ಷಣೆ ನೀಡುತ್ತದೆ. ಮಗುವಿನ ತೂಕವೂ ಹೆಚ್ಚಾಗುತ್ತದೆ. ಇದರಿಂದ ಅಪೌಷ್ಠಿಕ ಮುಕ್ತ ಸಮಾಜ ನಿರ್ಮಾಣ ಮಾಡಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಕೊಪ್ಪಳ ತಾಲೂಕಾ ಆರೋಗ್ಯಾಧಿಕಾರಿ ಡಾ. ವೆಂಕಟೇಶ ಅವರು ಮಾತನಾಡಿ, ತಾಯಿಯ ಹಾಲು ಮಗುವಿನ ಉತ್ತಮ ಬೆಳವಣಿಗೆಗೆ ಸಹಕಾರಿ, ತಾಯಿಯ ಆರೋಗ್ಯಕ್ಕೆ ರಕ್ಷಣೆ ಕುರಿತು ವಿವರವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಕುಷ್ಠರೋಗ ನಿಯಂತ್ರಣ ಅಧಿಕಾರಿಗಳು ಹಾಗೂ ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಅಧಿಕಾರಿಗಳು, ಆಡಳಿತ ವೈದ್ಯಾಧಿಕಾರಿಗಳು ಹಾಗೂ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿಗಳು, ಆಶಾ ಮೇಲ್ವಿಚಾರಕರು, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿಗಳು, ಪ್ರಾ.ಆ.ಸುರಕ್ಷಾಧಿಕಾರಿಗಳು, ಸಿಬ್ಬಂದಿಗಳು, ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು ಹಾಗೂ ತಾಯಂದಿರು ಭಾಗವಹಿಸಿ ಯಶಸ್ವಿಗೊಳಿಸಿದರು.

# ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯದಲ್ಲಿ ರಾಜಕೀಯ ಪಕ್ಷಗಳ ಸಕ್ರಿಯ ಪಾಲ್ಗೊಳ್ಳುವಿಕೆ ಮುಖ್ಯ: ಡಾ.ಸುರೇಶ ಬಿ.ಇಟ್ನಾಳ

ಅ.ಶ. ಸುದ್ದಿ ಕೊಪ್ಪಳ



**ಕೊಪ್ಪಳ: ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ರಾಜ್ಯಾದ್ಯಂತ ಹಮ್ಮಿಕೊಳ್ಳಲಾಗಿರುವ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ-2026 ಕಾರ್ಯಕ್ರಮವನ್ನು ಪಾರದರ್ಶಕ, ನಿಖರ ಹಾಗೂ ಚುನಾವಣಾ ಆಯೋಗದ ಮಾರ್ಗಸೂಚಿಗಳಿಗೆ ಅನುಗುಣವಾಗಿ ಅನುಷ್ಠಾನಗೊಳಿಸಬೇಕಿದ್ದು, ಈ ಕಾರ್ಯದಲ್ಲಿ ಎಲ್ಲಾ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಸಕ್ರಿಯವಾಗಿ ಸಹಕರಿಸುವಂತೆ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳಾದ ಡಾ. ಸುರೇಶ್ ಬಿ. ಇಟ್ನಾಳ ಅವರು ತಿಳಿಸಿದರು.**

ಮಂಗಳವಾರದಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ-2026ಕ್ಕೆ ಸಂಬಂಧಿಸಿದಂತೆ ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗೆ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಮತದಾರರ ಪಟ್ಟಿಯ ನಿಖರತೆ ಹಾಗೂ ವಿಶ್ವಾಸಾರ್ಹತೆಯನ್ನು ಕಾಪಾಡುವ ಉದ್ದೇಶದಿಂದ ಚುನಾವಣಾ ಆಯೋಗವು ನಿಗದಿಪಡಿಸಿರುವ ವೇಳಾಪಟ್ಟಿಯಂತೆ ಜಿಲ್ಲೆಯಾದ್ಯಂತ ವಿವಿಧ ಹಂತಗಳ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳಲಾಗುತ್ತಿದ್ದು, ಈ ಪ್ರಕ್ರಿಯೆಯಲ್ಲಿ ರಾಜಕೀಯ ಪಕ್ಷಗಳ ಸಲಹೆ, ಸಹಕಾರ ಮತ್ತು ಭಾಗವಹಿಸುವಿಕೆ ಅತ್ಯಂತ ಮಹತ್ವದ್ದಾಗಿದೆ ಎಂದು ಅವರು ಹೇಳಿದರು.

ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಮನೆ-ಮನೆಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸುವ ಕಾರ್ಯ, ಮತಗಟ್ಟೆಗಳ ಮರುಹೊಂದಾಣಿಕೆ, ಕರಡು ಮತದಾರರ ಪಟ್ಟಿಯ ಪ್ರಕಟಣೆ, ಹಕ್ಕು ಮತ್ತು ಆಕ್ಷೇಪಣೆಗಳ ಸ್ವೀಕಾರ, ಅವುಗಳ ಪರಿಶೀಲನೆ ಹಾಗೂ ಅಂತಿಮ ಮತದಾರರ ಪಟ್ಟಿಯ ಪ್ರಕಟಣೆ ಸೇರಿದಂತೆ ಎಲ್ಲ ಕಾರ್ಯಗಳು ನಿಗದಿತ ವೇಳಾಪಟ್ಟಿಯಂತೆ ನಡೆಯಲಿವೆ. ಮತದಾರರ ಪಟ್ಟಿಯಲ್ಲಿ ಅರ್ಹ ಮತದಾರರು ಸೇರ್ಪಡೆಯಾಗುವಂತೆಯೂ, ಅನರ್ಹ ಹೆಸರುಗಳು ತೆಗೆದುಹಾಕುವಂತೆಯೂ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಅವರು ಮಾಹಿತಿ ನೀಡಿದರು. ಜಿಲ್ಲೆಯ ಐದು ವಿಧಾನಸಭಾ ಕ್ಷೇತ್ರಗಳಿಗೆ ಸಂಬಂಧಿಸಿದಂತೆ Absent, Shifted, Death, Duplicate ಹಾಗೂ Other ವಿಭಾಗಗಳಲ್ಲಿ ಗುರುತಿಸಲಾದ ಒಟ್ಟು 1,49,663 ಮತದಾರರ ವಿವರಗಳನ್ನು ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ಒದಗಿಸಲಾಗಿದೆ.

ಈ ವಿವರಗಳನ್ನು ಪರಿಶೀಲಿಸಿ ಯಾವುದೇ ಆಕ್ಷೇಪಣೆಗಳು ಅಥವಾ ತಿದ್ದುಪಡಿಗಳಿದ್ದಲ್ಲಿ ಚುನಾವಣಾ ಆಯೋಗ ನಿಗದಿಪಡಿಸಿರುವ ಅವಧಿಯೊಳಗೆ ಸಂಬಂಧಿಸಿದ ಮತದಾರರ ನೋಂದಣಾಧಿಕಾರಿಗಳಿಗೆ ಸಲ್ಲಿಸಬೇಕು. ಇದರಿಂದ ಮತದಾರರ ಪಟ್ಟಿಯ ನಿಖರತೆ ಮತ್ತು ಪಾರದರ್ಶಕತೆ ಮತ್ತಷ್ಟು ಹೆಚ್ಚಲಿದೆ ಎಂದು ಅವರು ತಿಳಿಸಿದರು. ಮತಗಟ್ಟೆಗಳ ಮರುಹೊಂದಾಣಿಕೆ (Rationalization of Polling Stations) ಕುರಿತು ಸಭೆಯಲ್ಲಿ ವಿವರವಾದ ಚರ್ಚೆ ನಡೆಯಿತು. 1,200 ಕ್ಕಿಂತ ಹೆಚ್ಚು ಮತದಾರರನ್ನು ಹೊಂದಿರುವ ಮತಗಟ್ಟೆಗಳನ್ನು ವಿಭಜಿಸಿ ಮತದಾರರಿಗೆ ಸುಗಮ ಮತದಾನ ವ್ಯವಸ್ಥೆ ಕಲ್ಪಿಸುವ ಉದ್ದೇಶದಿಂದ ಜಿಲ್ಲೆಯಲ್ಲಿನ ಮತಗಟ್ಟೆಗಳ ಸಂಖ್ಯೆಯನ್ನು 1,315 ರಿಂದ 1,352 ಕ್ಕೆ ಹೆಚ್ಚಿಸಲು ಪ್ರಸ್ತಾವನೆ ರೂಪಿಸಲಾಗಿದೆ. ಇದರಿಂದ ಮತದಾನ ಪ್ರಕ್ರಿಯೆ ಮತ್ತಷ್ಟು ಸುಗಮ ಹಾಗೂ ಪರಿಣಾಮಕಾರಿಯಾಗಲಿದೆ ಎಂದು ಅವರು ತಿಳಿಸಿದರು.

ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯದಲ್ಲಿ ಬೂತ್ ಮಟ್ಟದ ಅಧಿಕಾರಿಗಳ ಶ್ರಮ ಹೆಚ್ಚಿದೆ. ತಮಗೆ ಸಂಬಂಧಿಸಿದ ಮತಗಟ್ಟೆ ವ್ಯಾಪ್ತಿಯಲ್ಲಿ ಪ್ರತಿ ಮನೆಗೆ ತೆರಳಿ ಗಣತಿ ನಮೂನೆ ನೀಡಿ, ಮರಳಿ ಸಂಗ್ರಹಿಸುವುದು ಸುಲಭ ಕೆಲಸವಲ್ಲ. ಅದನ್ನು ಜಿಲ್ಲೆಯ ಎಲ್ಲ ಬಿಎಲ್‌ಒಗಳು ಬಹಳ ಅಚ್ಚುಕಟ್ಟಾಗಿ ನಿಭಾಯಿಸಿರುವುದು ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ ಕಾರ್ಯ ಯಶಸ್ವಿಯಾಗಲು ಪ್ರಮುಖ ಕಾರಣವಾಗಿದೆ ಎಂದು ಇದೇ ಸಂದರ್ಭ ಜಿಲ್ಲಾಧಿಕಾರಿಗಳು ಬಿಎಲ್‌ಒ ಗಳ ಕಾರ್ಯನ್ನು ಶ್ಲಾಘಿಸಿದರು.

ಸಭೆಯಲ್ಲಿ ಭಾಗವಹಿಸಿದ್ದ ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ಮತದಾರರ ವಿವರಗಳನ್ನು ಹಸ್ತಾಂತರಿಸಿ ಮಾತನಾಡಿದ ಜಿಲ್ಲಾಧಿಕಾರಿಗಳು ತಮಗೆ ನೀಡಿರುವ ಪಟ್ಟಿಯಲ್ಲಿ ವಲಸೆ ಹೋದ, ಕಣ್ತಪ್ಪಿನಿಂದ ಬಿಟ್ಟು ಹೋದ ಮತದಾರರ ಮಾಹಿತಿ ಇದ್ದಲ್ಲಿ ಈ ಕುರಿತು ಬಿಎಲ್‌ಎ ಗಳು ಆಕ್ಷೇಪಣೆ ಸಲ್ಲಿಸಬಹುದು. ಹಾಗೆಯೇ ವಲಸೆ ಹೋದ ಅಥ-'ವಾ ಈ ಬಗ್ಗೆ ಮಾಹಿತಿ ಇಲ್ಲದ ಮತದಾರರಿದ್ದಲ್ಲಿ ಅವರಿಗೆ ಗಣತಿ ನಮೂನೆಯನ್ನು ಭರ್ತಿ ಮಾಡಲು ತಿಳಿಸಿ, ಆನ್‌ಲೈನ್ ನಲ್ಲಿಯೂ ನಮೂನೆ ಭರ್ತಿಗೆ ಅವಕಾಶವಿದ್ದು, ಆನ್‌ಲೈನ್ ನಲ್ಲಿಯೂ ಭರ್ತಿ ಮಾಡಲು ತಿಳಿಸಿ. ಪರಿಷ್ಕರಣೆ ಕಾರ್ಯದ ವೇಳಾಪಟ್ಟಿಯ ನಂತರವೂ ಮತದಾರರ ನೋಂದಣಿಗೆ ಅವಕಾಶವಿದ್ದು, ನಮೂನೆ-6 ಅನ್ನು ಭರ್ತಿ ಮಾಡುವ ಮೂಲಕ ನೋಂದಣಿ ಮಾಡಿಕೊಳ್ಳಬಹುದು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಸಭೆಯಲ್ಲಿ ಭಾಗವಹಿಸಿದ್ದ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಮತದಾರರ ಪಟ್ಟಿ ಪರಿಷ್ಕರಣೆ ಕುರಿತು ತಮ್ಮ ಸಲಹೆ ಹಾಗೂ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಈ ಬಗ್ಗೆ ಜಿಲ್ಲಾಧಿಕಾರಿಗಳು ಚುನಾವಣಾ ಆಯೋಗದ ಮಾರ್ಗಸೂಚಿಗಳನ್ವಯ ಎಲ್ಲ ಸಲಹೆಗಳನ್ನು ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು. ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ, ಚುನಾವಣಾ ತಹಶೀಲ್ದಾರ ರವಿ ವಸ್ತ್ರದ, ಚುನಾವಣಾ ಶಾಖೆಯ ನಾಗರಾಜ, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೃಷ್ಣ ಎನ್. ಇಟ್ಟಂಗಿ, ಬಿಜೆಪಿ ಪ್ರತಿನಿಧಿ ರಾಜು ಬಾಕಳೆ, ಬಿಎಸ್‌ಪಿ ಜಿಲ್ಲಾಧ್ಯಕ್ಷ ಕೆ.ಎಸ್. ಮೈಲಾರಪ್ಪ, ಸೇರಿದಂತೆ ಇತರರು ಉಪಸ್ಥಿತರಿದ್ದರು.

1ನೇ ಪುಟದಿಂದ....

ನೀಡದಿದ್ದರೆ, ಮೀಟರ್ ರೀಡರ್‌ಗಳು ಮತ್ತೊಮ್ಮೆ ಮನೆಗಳಿಗೆ ಭೇಟಿ ನೀಡುವಂತೆ ನಿರ್ದೇಶನ ನೀಡಲಾಗಿದೆ. ಸಮೀಕ್ಷೆಗೆ ಅಡ್ಡಿ: ಈ ನಡುವೆ ಬೆಸ್ಕಾಂ ವ್ಯಾಪ್ತಿಯ ವೈಟ್‌ಫೀಲ್ಡ್ , ಮಹದೇವಪುರ ಮತ್ತು ಸರ್ಜಾಪುರ ಸೇರಿದಂತೆ ಕೆಲವು ಪ್ರದೇಶಗಳ ದೊಡ್ಡ ಅಪಾರ್ಟ್‌ಮೆಂಟ್‌ಗಳಲ್ಲಿ ಮೀಟರ್ ರೀಡರ್‌ಗಳಿಗೆ ಪ್ರವೇಶ ನೀಡುತ್ತಿಲ್ಲ ಎಂಬ ದೂರುಗಳು ಕೇಳಿಬಂದಿವೆ. ಕೆಲ ನಿವಾಸಿಗಳು ತಮ ವೈಯಕ್ತಿಕ ಮಾಹಿತಿಯನ್ನು ಹಂಚಿಕೊಳ್ಳಲು ಹಿಂದೇಟು ಹಾಕುತ್ತಿರುವುದರಿಂದ ಸಮೀಕ್ಷೆ ಕಾರ್ಯಕ್ಕೆ ಅಡ್ಡಿಯಾಗುತ್ತಿದೆ ಎಂದು ಸಿಬ್ಬಂದಿ ತಿಳಿಸಿದ್ದಾರೆ. ಈ ಬಗ್ಗೆ ಮೀಟರ್ ರೀಡರ್‌ಗಳು ಬೆಸ್ಕಾಂ ಮುಖ್ಯ ಕಚೇರಿಯ ಗಮನಕ್ಕೂ ತಂದಿದ್ದಾರೆಂದು ತಿಳಿದುಬಂದಿದೆ. ಕೆಲವರು ತಮ ಮಾಹಿತಿಯನ್ನು ಹಂಚಿಕೊಳ್ಳಲು ಆಸಕ್ತಿ ತೋರದಿರುವುದು ನಿಜ. ಅಂಥ ಸಂದರ್ಭಗಳಲ್ಲಿ ಆಯಪ್‌ನಲ್ಲಿ ಮಾಹಿತಿ ನೀಡಲು ನಿರಾಕರಿಸಿದ್ದಾರೆ ಎಂಬ ಆಯ್ಕೆಯಿದೆ ಮತ್ತು ಫಲಾನುಭವಿಯಿಂದ ಸಹಿಯನ್ನೂ ಪಡೆಯಲಾಗುತ್ತದೆ. ಇದುವರೆಗೆ ಯಾವುದೇ ಫಲಾನುಭವಿಯನ್ನು ಪಟ್ಟಿಯಿಂದ ಕೈಬಿಡಲಾಗಿಲ್ಲ. ಯೋಜನೆಯಿಂದ ಯಾರನ್ನಾದರೂ ಹೊರಗಿಡುವ ಕುರಿತು ಅಂತಿಮ ನಿರ್ಧಾರವನ್ನು ಸರ್ಕಾರವೇ ಕೈಗೊಳ್ಳಲಿದೆ ಎಂದು ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಶಿವಶಂಕರ ಎನ್ ಅವರು, ಸ್ಪಷ್ಟಪಡಿಸಿದ್ದಾರೆ. ಸಮೀಕ್ಷೆ ವೇಳೆ ಯಾವ ದಾಖಲೆಗಳು ಬೇಕು? ಮನೆ-ಮನೆ ಸಮೀಕ್ಷೆ ವೇಳೆ ಫಲಾನುಭವಿಗಳು ಈ ಕೆಳಗಿನ ದಾಖಲೆಗಳನ್ನು ಸಿದ್ಧವಾಗಿಟ್ಟುಕೊಳ್ಳುವಂತೆ ಅಧಿಕಾರಿಗಳು ಮನವಿ ಮಾಡಿದ್ದಾರೆ. ಆಧಾರ್ ಕಾರ್ಡ್ ಪಾಸ್‌ಪೋರ್ಟ್ ಗಾತ್ರದ ಭಾವಚಿತ್ರ ಮತದಾರರ ಗುರುತಿನ ಚೀಟಿ ಪ್ಯಾನ್ ಕಾರ್ಡ್ ಬಾಡಿಗೆ ಅಥವಾ ಲೀಸ್ ಒಪ್ಪಂದ ಪತ್ರ(ಅಗತ್ಯವಿದ್ದರೆ) ಪಡಿತರ ಚೀಟಿ ಜಾತಿ ಪ್ರಮಾಣಪತ್ರ (ಐಚ್ಛಿಕ) ಬಿಪಿಎಲ್ ಅಥವಾ ಎಪಿಎಲ್ ಕಾರ್ಡ್ ವಿವರಗಳು ಇದರ ಜೊತೆಗೆ ಫಲಾನುಭವಿಯ ವೃತ್ತಿ, ವಾಸಿಸುವ ಸ್ಥಳ ಸೇರಿದಂತೆ ಕೆಲವು ಮೂಲಭೂತ ಮಾಹಿತಿಯನ್ನೂ ಮೀಟರ್ ರೀಡರ್‌ಗಳು ದಾಖಲಿಸುತ್ತಿದ್ದಾರೆ. ಇಲ್ಲಿವರೆಗೆ ಬೆಸ್ಕಾಂ ವ್ಯಾಪ್ತಿಯಲ್ಲಿ 37,28,114, ಸಿಇಎಸ್‌ಸಿ (ಮೈಸೂರು) ವ್ಯಾಪ್ತಿಯಲ್ಲಿ 11,09,782, ಗೆಸ್ಕಾಂ (ಕಲಬುರಗಿ) ವ್ಯಾಪ್ತಿಯಲ್ಲಿ 8,50,786, ಹೆಸ್ಕಾಂ (ಹುಬ್ಬಳ್ಳಿ-ಧಾರವಾಡ) ವ್ಯಾಪ್ತಿಯಲ್ಲಿ 22,03,401, ಮೆಸ್ಕಾಂ (ಮಂಗಳೂರು) ವ್ಯಾಪ್ತಿಯಲ್ಲಿ 12,31,289 ಹಾಗೂ ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರ ಸಂಘದ ವ್ಯಾಪ್ತಿಯಲ್ಲಿ 26,709 ಫಲಾನುಭವಿಗಳ ಸಮೀಕ್ಷೆ ಪೂರ್ಣಗೊಂಡಿದೆ. 26,997 ಕೋಟಿಗೂ ಅಧಿಕ ವೆಚ್ಚ ಆಗಸ್ಟ್ 2023ರಲ್ಲಿ ಆರಂಭವಾದ ಗೃಹಜ್ಯೋತಿ ಯೋಜನೆಗಾಗಿ ಮೇ 2026ರವರೆಗೆ ರಾಜ್ಯ ಸರ್ಕಾರ ಒಟ್ಟು ರೂ.26,997.54 ಕೋಟಿ ವೆಚ್ಚ ಮಾಡಿದೆ. ಇದರಲ್ಲಿ ಬೆಸ್ಕಾಂ ವ್ಯಾಪ್ತಿಯಲ್ಲೇ ಅತಿ ಹೆಚ್ಚು 12,577.61 ಕೋಟಿ ರೂ. ವೆಚ್ಚವಾಗಿದೆ.

## ಅಕ್ರಮ ಚಟುವಟಿಕೆಗಳಿಗೆ ಕಡಿವಾಣ: ಕಠಿಣ ಕ್ರಮದ ಎಚ್ಚರಿಕೆ ನೀಡಿದ ಉಪ ವಿಭಾಗಾಧಿಕಾರಿ ನ್ಯಾಮನಗೌಡ

ಅ.ಶ. ಸುದ್ದಿ ಕನಕಗಿರಿ

**ಕನಕಗಿರಿ: ಪಟ್ಟಣ ಸೇರಿದಂತೆ ತಾಲೂಕಿನ ಗ್ರಾಮೀಣ ಪ್ರದೇಶಗಳಲ್ಲಿ ನಡೆಯುತ್ತಿರುವ ಅಕ್ರಮ ಮರಳು ಸಾಗಣೆ, ಮಟ್ಕಾ, ಇಸ್ಪೀಟ್ ಆಟ, ಕುರಿ ಹಾಗೂ ಹಂದಿ ಕಳ್ಳತನ ಸೇರಿದಂತೆ ವಿವಿಧ ಅಕ್ರಮ ಚಟುವಟಿಕೆಗಳಿಗೆ ಕಟ್ಟುನಿಟ್ಟಿನ ಕಡಿವಾಣ ಹಾಕಲಾಗುವುದು ಎಂದು ಗಂಗಾವತಿ ಉಪ ವಿಭಾಗದ ಪೊಲೀಸ್ ಉಪ ವಿಭಾಗಾಧಿಕಾರಿ (ಡಿವೈಎಸ್‌ಪಿ) ನ್ಯಾಮನಗೌಡ ಎಚ್ಚರಿಕೆ ನೀಡಿದರು.**



ಮಂಗಳವಾರ ಕನಕಗಿರಿ ಪೊಲೀಸ್ ಠಾಣೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಾಲೂಕಿನಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ಪೊಲೀಸ್ ಇಲಾಖೆ ಸಂಪೂರ್ಣ ಬದ್ಧವಾಗಿದೆ. ಅಕ್ರಮ ಚಟುವಟಿಕೆಗಳಲ್ಲಿ ತೊಡಗಿರುವವರ ವಿರುದ್ಧ ಯಾವುದೇ ಮುಲಾಜಿಲ್ಲದೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಸ್ಪಷ್ಟಪಡಿಸಿದರು. ಈ ಸಂಬಂಧ ಪೊಲೀಸ್ ಅಧಿಕಾರಿಗಳು ಹಾಗೂ ಸಂಬಂಧಪಟ್ಟ ಕಂದಾಯ ಅಧಿಕಾರಿಗಳಿಗೆ ಈಗಾಗಲೇ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಲಾಗಿದೆ. ಸಾರ್ವಜನಿಕರ ಸಹಕಾರವೂ ಅತ್ಯಗತ್ಯವಾಗಿದ್ದು, ಅಕ್ರಮ ಚಟುವಟಿಕೆಗಳ ಬಗ್ಗೆ ಮಾಹಿತಿ ತಿಳಿದ ಕೂಡಲೇ ಸಮೀಪದ ಪೊಲೀಸ್ ಠಾಣೆಗೆ ಅಥವಾ ಪೊಲೀಸ್ ಅಧಿಕಾರಿಗಳಿಗೆ ಮಾಹಿತಿ ನೀಡುವಂತೆ ಮನವಿ ಮಾಡಿದರು. ಈ ಸಂದರ್ಭದಲ್ಲಿ ಕನಕಗಿರಿ ಪೊಲೀಸ್ ಠಾಣೆಯ ಪಿಐ ವಿ. ನಾರಾಯಣ ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಧರ್ಮಸ್ಥಳ ಯೋಜನೆಯಿಂದ 'ಸ್ವಾಸ್ಥ ಸಂಕಲ್ಪ' ಕಾರ್ಯಕ್ರಮ

## ಕೋಟಿ ಸಂಪತ್ತಿಗಿಂತ ಆರೋಗ್ಯ ಸಂಪತ್ತು ಮುಖ್ಯ: ಶರಣಬಸಪ್ಪ ದಾನಕೈ

ಅ.ಶ. ಸುದ್ದಿ ಯಲಬುರ್ಗಾ

**ಯಲಬುರ್ಗಾ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ (ಬಿ.ಸಿ. ಟ್ರಸ್ಟ್) ವತಿಯಿಂದ ಯಲಬುರ್ಗಾದ ಮೌಲಾನಾ ಆಜಾದ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ 'ಸ್ವಾಸ್ಥ ಸಂಕಲ್ಪ' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.**

ಕಾರ್ಯಕ್ರಮವನ್ನು ಅಖಿಲ ಕರ್ನಾಟಕ ಕೊಪ್ಪಳ ಜಿಲ್ಲಾ ಜನಜಾಗೃತಿ ಸಮಿತಿ ಸದಸ್ಯ ಶರಣಬಸಪ್ಪ ಕೆ. ದಾನಕೈ ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿ, ಯುವ ಸಮುದಾಯ ಬೀಡಿ, ಸಿಗರೇಟ್, ಡ್ರಗ್ಸ್ ಹಾಗೂ ಇತರೆ ಮಾದಕ ವಸ್ತುಗಳ ದುಶ್ಚಟಗಳಿಗೆ ಬಲಿಯಾಗುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಇಂತಹ ದುಶ್ಚಟಗಳಿಂದ ದೂರವಿದ್ದು ಆರೋಗ್ಯಕರ ಜೀವನಶೈಲಿಯನ್ನು ಅಳವಡಿಸಿಕೊಳ್ಳಬೇಕು. ಕೋಟಿ ಸಂಪತ್ತಿಗಿಂತ ಆರೋಗ್ಯ ಸಂಪತ್ತು ಮುಖ್ಯ ಎಂಬುದನ್ನು




ಪ್ರತಿಯೊಬ್ಬರೂ ಅರಿತು ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಡಾ. ಶೇಖರ ಭಜೇಂತ್ರಿ ಮಾತನಾಡಿ, ಮಾದಕ ವಸ್ತುಗಳ ಸೇವನೆಯಿಂದ ದೈಹಿಕ ಹಾಗೂ ಮಾನಸಿಕ ಆರೋಗ್ಯ ಹದಗೆಟ್ಟು ಅನೇಕ ಗಂಭೀರ ಕಾಯಿಲೆಗಳು ಉಂಟಾಗುತ್ತವೆ. ಆದ್ದರಿಂದ ಯುವಕರು ದುಶ್ಚಟಗಳಿಂದ ದೂರವಿದ್ದು, ಉತ್ತಮ ಸ್ನೇಹ ಬಳಗವನ್ನು ಬೆಳೆಸಿಕೊಂಡು ಸನ್ಮಾರ್ಗದಲ್ಲಿ ಸಾಗಬೇಕು ಎಂದು ಸಲಹೆ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮೌಲಾನಾ ಆಜಾದ್ ಆಂಗ್ಲ ಮಾಧ್ಯಮ ಶಾಲೆಯ ಮುಖ್ಯಗುರು ಶೀಲ್ಪಾ ಕೆ. ಮಾತನಾಡಿ, ಮಾದಕ ವ್ಯಸನದಿಂದ ಅನೇಕ ಯುವಕರ ಭವಿಷ್ಯ ಹಾಳಾಗುತ್ತಿದ್ದು, ಕುಟುಂಬಗಳೂ ಸಂಕಷ್ಟಕ್ಕೆ ಸಿಲುಕುತ್ತಿರುವ ಉದಾಹರಣೆಗಳು ಸಾಕಷ್ಟಿವೆ.

ವಿದ್ಯಾರ್ಥಿಗಳು ಉತ್ತಮ ವಿದ್ಯಾಭ್ಯಾಸದೊಂದಿಗೆ ಉತ್ತಮ ವ್ಯಕ್ತಿತ್ವವನ್ನು ಬೆಳೆಸಿಕೊಂಡು ಸಮಾಜಕ್ಕೆ ಮಾದರಿಯಾಗಬೇಕು ಎಂದು ಹೇಳಿದರು. ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೇಲ್ವಿಚಾರಕಿ ಕಾವ್ಯ ಸಿರಿಗೇರಿ ಪ್ರಾಸ್ತಾವಿಕವಾಗಿ ಮಾತನಾಡಿ, ಯೋಜನೆಯ ವಿವಿಧ ಸಾಮಾಜಿಕ ಹಾಗೂ ಆರೋಗ್ಯ ಜಾಗೃತಿ ಕಾರ್ಯಕ್ರಮಗಳ ಕುರಿತು ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಸೇವಾ ಪ್ರತಿನಿಧಿ ಶಿಲ್ಪಾ, ಶಿಕ್ಷಕರಾದ ಬಾಳಪ್ಪ ಹಡಪದ, ಶಿವಪ್ಪ ದಿವಟರ ಹಾಗೂ ಶಾಲೆಯ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## 'ವಚನಾಮೃತ'

ಅಂಬಲಿ ಗಡಿಗೆಯೊಂದರೊಳ್ ಕೂತು
ಸಟಗದಿಂ ಕೈಯಾಡಿಸಿದೊಡೆ ಮುದ್ದೆ
ಬಪ್ಪುದೇನಯ್ಯ !.
ಹೆಬ್ಬುಲಿ ಬಾಯೊಳ್ ಕೂತು
ಭಗವದ್ಗೀತೆ ಅರುಹಿದೊಡೆ ತಿನ್ನದೆ
ಬಿಟ್ಟಿತೆ ಮಂಕೆ ಸತ್ಯವಾಣಿ!!.



ವಾಣಿ ಭಂಡಾರಿ.

# ನಿವೃತ್ತ ಉಪನ್ಯಾಸಕ ಮಹೇಶ ನಾಯಕರಿಗೆ ಬೀಳ್ಕೊಡುಗೆ



ಅ.ಶ. ಸುದ್ದಿ ಅಂಕೋಲಾ

**ಅಂಕೋಲಾ: ಪಟ್ಟಣದ ಸರಕಾರಿ ಪದವಿಪೂರ್ವ ಕಾಲೇಜಿನ ಕನ್ನಡ ಉಪನ್ಯಾಸಕ ಮಹೇಶ ಬಿ. ನಾಯಕ ಅವರು ಸೇವಾ ನಿವೃತ್ತಿ ಹೊಂದಿದ್ದು, ನಾಡವರ ಸಮುದಾಯ ಭವನದಲ್ಲಿ ಅಧ್ಯಾಪಕ ವರ್ಗ ಹಾಗೂ ವಿದ್ಯಾರ್ಥಿಗಳು ಬೀಳ್ಕೊಡುಗೆ ಹಮ್ಮಿಕೊಂಡಿದ್ದರು.**

ಸನ್ಮಾನ ಸ್ವೀಕರಿಸಿದ ಮಹೇಶ ನಾಯಕ ಮಾತನಾಡಿ, ತಾಲೂಕಿನಲ್ಲಿ ಅತಿ ಹೆಚ್ಚು ವಿದ್ಯಾರ್ಥಿಗಳನ್ನು ಹೊಂದಿರುವುದೇ ನನ್ನ ನಿಜವಾದ ಸಂಪತ್ತು. ವೃತ್ತಿ ಧರ್ಮವನ್ನು ಸಹಜವಾಗಿ ಪಾಲಿಸಿದ್ದೇನೆ. ಎಲ್ಲರಿಂದಲೇ ನಾನು ಎನ್ನುವ ಭಾವನೆ ಹೊಂದಿದ್ದು ಈ ಗೌರವಕ್ಕೆ ಕಾರಣವಿದೆ ಎಂದರು. ನಿವೃತ್ತ ಐಎಎಸ್ ಅಧಿಕಾರಿ ಪಾಂಡುರಂಗ ನಾಯಕ, ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಮಂಜುನಾಥ ನಾಯ್ಕ, ಅಭಿವೃದ್ಧಿ ಸಮಿತಿಯ ದೇವಿದಾಸ ಪ್ರಭು, ಪಪ್ಪು ಸೈಯದ್, ಏಕನಾಥ ನಾಯ್ಕ ವೇದಿಕೆಯಲ್ಲಿದ್ದು ಮಾತನಾಡಿದರು.

ಆಶ್ರಯ ಫೌಂಡೇಶನ್ ಅಧ್ಯಕ್ಷ ರಾಜೀವ ಗಾಂವಕರ, ಸಹಕಾರಿ ಡಿ. ಎನ್.ನಾಯಕ, ಉಪನ್ಯಾಸಕರಾದ ಆರ್. ಟಿ. ನಾಯಕ, ರತ್ನಾಕರ ನಾಯ್ಕ ಸಿದ್ದಾಪುರ ಮಾತನಾಡಿದರು. ಉಪನ್ಯಾಸಕರಾದ ಮಾರುತಿ ಹರಿಕಂತ್ರ, ಕೃಷ್ಣಾ ಗೌಡ ನಿರೂಪಿಸಿದರು. ರೇಷ್ಮಾ ಗೌಡ ಸನ್ಮಾನ ಪತ್ರ ವಾಚಿಸಿದರು. ಶೋಭಾ ಗೌಡ ಸ್ವಾಗತಿಸಿದರು. ಪ್ರತಿಮಾ ಕರ್ಕಿಕರ ನಿರೂಪಿಸಿದರು. ಪ್ರಮೋದ ಆಚಾರಿ ವಂದಿಸಿದರು.

# ಗಿಡಮೂಲಿಕೆಗಳ ಅರಿವು, ಸಂರಕ್ಷಣೆಎಲ್ಲರ ಹೊಣೆ: ಡಾ. ಕಿರಣ್‌ಅಂಕ್ಲೇಕರ್

ಅ.ಶ. ಸುದ್ದಿ ಅಂಕೋಲಾ

**ಅಂಕೋಲಾ: ಪತಂಜಲಿ ಯೋಗ ಸಮಿತಿ ಅಂಕೋಲಾ, ಮಹಿಳಾ ಪತಂಜಲಿ ಯೋಗ ಸಮಿತಿ, ಭಾರತ ಸ್ವಾಭಿಮಾನಟ್ರಸ್ಟ್, ಯುವ ಭಾರತ ಹಾಗೂ ಕಿಸಾನ್‌ಯೋಗ ಸಮಿತಿ, ಲಾಯನ್ಸ್‌ಕ್ಲಬ್ ಅಂಕೋಲಾ ಸಿಟಿ ಇವರಆಶ್ರಯದಲ್ಲಿಆಚಾರ್ಯ ಬಾಲಕೃಷ್ಣಅವರಜನ್ಮದಿನವನ್ನು 'ಜಡಿಬೂಟಿ ದಿನ'ವನ್ನಾಗಿಆಚರಿಸಲಾಯಿತು.**

ಕಾರ್ಯಕ್ರಮ ಉದ್ಘಾಟಿಸಿದ ಡಾ.ಕಿರಣ್-ಅಂಕ್ಲೇಕರ್ ಮಾತನಾಡಿ, ನಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ಸಹಜವಾಗಿದೊರೆಯುವಔಷಧೀಯ ಗಿಡಮೂಲಿಕೆಗಳ ಕುರಿತು ಪ್ರತಿಯೊಬ್ಬರೂ




ತಿಳಿವಳಿಕೆ ಹೊಂದಿರಬೇಕು. ಅವುಗಳ ಔಷಧೀಯ ಮಹತ್ವವನ್ನು ಮುಂದಿನ ಪೀಳಿಗೆಗೆ ಪರಿಚಯಿಸುವುದರೊಂದಿಗೆ ಸಂರಕ್ಷಿಸುವ ಹೊಣೆಗಾರಿಕೆಯೂ ನಮ್ಮೆಲ್ಲರ ಮೇಲಿದೆಎಂದರು. ಹಾವು, ನಾಯಿ ಹಾಗೂ ವಿವಿಧ ವಿಷ-ಜಂತುಗಳ ಕಡಿತಕ್ಕೆ ನಾಟಿಔಷಧ ನೀಡುವ ಮೂಲಕ ದೀರ್ಘಕಾಲದಿಂದಜನಸೇವೆಯಲ್ಲಿ ತೊಡಗಿಸಿಕೊಂಡಿರುವ ಕುಂಬಾರಕೇರಿಯ ಪೀರುಅನಂತ ನಾಯ್ಕಅವರನ್ನುಇದೇ ಸಂದರ್ಭದಲ್ಲಿ ಸನ್ಮಾನಿಸಲಾಯಿತು.

ಲಾಯನ್ಸ್‌ಕ್ಲಬ್ ಅಂಕೋಲಾ ಸಿಟಿಯ ಅಧ್ಯಕ್ಷ ಪ್ರದೀಪರಾಯ್ಕರ ಪರಿಸರ ಸಂರಕ್ಷಣೆಯಅಗತ್ಯ ಮತ್ತುಅದರ ಸಾಮಾಜಿಕ ಮಹತ್ವವನ್ನು ವಿವರಿಸಿದರು.ಲಾಯನ್ಸ್‌ಕ್ಲಬ್ ಅಂಕೋಲಾ ಸಿಟಿಯ ವತಿಯಿಂದಕಾರ್ಯಕ್ರಮದಲ್ಲಿ ಸೀಡ್ ಬಾಲ್‌ಗಳನ್ನು ವಿತರಿಸಲಾಯಿತು. ಭಾರತ ಸ್ವಾಭಿಮಾನಟ್ರಸ್ಟ್ನ ಪ್ರಭಾರಿಡಾ. ವಿಜಯದೀಪ್‌ಅಧ್ಯಕ್ಷತೆ ವಹಿಸಿದ್ದರು. ಮಹಿಳಾ ಪತಂಜಲಿ ಯೋಗ ಸಮಿತಿಯ ಪ್ರಭಾರಿ ನಿರೂಪಮಾ ಶ್ಯಾಮಸುಂದರ್‌ಪ್ರಾರ್ಥಿಸಿದರು.

ಪತಂಜಲಿ ಯೋಗ ಸಮಿತಿಯ ಪ್ರಭಾರಿ ವಿನಾಯಕಗುಡಿಗಾರ ಪ್ರಾಸ್ತಾವಿಕವಾಗಿ ಮಾತನಾಡಿದರು. ಯುವ ಭಾರತದ ಪ್ರಭಾರಿ ಸತೀಶ ನಾಯ್ಕ ಸ್ವಾಗತಿಸಿದರು.ಕಿಸಾನ್‌ಯೋಗ ಸಮಿತಿಯ ಪ್ರಭಾರಿಅಭಯ ಮರಬಳ್ಳಿ ವಂದಿಸಿದರು.ಪತಂಜಲಿ ಯೋಗ ಸಮಿತಿಯ ಕಾರ್ಯದರ್ಶಿ ವಿ.ಕೆ.ನಾಯರ್ ನಿರೂಪಿಸಿದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಎಲ್ಲ ಯೋಗಬಂಧುಗಳಿಗೆ ಔಷಧೀಯ ಗಿಡಮೂಲಿಕೆಗಳನ್ನು ವಿತರಿಸಲಾಯಿತು.

# ಲೇಖಕರ ದಿನಚರಿ...

## ಕವಿತೆ ಬರೆಯುವುದೆಂದರೆ.



ಮನದ ಬಿಳಿ ಹಾಳೆಯ ಮೇಲೆ
ಕನಸಿನ ಲೇಖನಿ ಹಿಡಿದು..
ಒಮ್ಮೊಮ್ಮೆ ಕಲ್ಪನೆಗೂ-ವಾಸ್ತವಕೂ ಸ್ನೇಹ ತಾಕಿಸಿ...
ಮಗದೊಮ್ಮೆ ನೆನಪಿನ ನೋವಿಗೂ-ನಲಿವಿಗೂ ಭಾವ
ಸೋಕಿಸಿ.. ವಿರಹ-ವಿಷಾದಕೂ ಬೆಸುಗೆ ಹಾಕಿಸಿ..
ಭಾವಗಳ ರೂಪಕ್ಕೆ ಸಂಭ್ರಮದ ಸೀಮಂತ ಮಾಡಿಸಿ..
ಅಕ್ಷರಗಳ ಬಣ್ಣ ಬಣ್ಣದ ತುಕಡಿ ಜೋಡಿಸಿದ ಕೌದಿ
ಹಾಸಿ.. ಪ್ರಾಸ, ಪದಪುಂಜಗಳಂದದಿ ಚಂದದಿ ಹೆ-
ರಿಗೆ ಮಾಡಿಸಿ.. ವಿಶಿಷ್ಟತೆಯ ಕವನೆವೆಂಬ ಕೂಸಿಗೆ
ಕುಲಾವಿ ಹೊಲಿಸಿ.. ಅಂದದ ಶಿರೋನಾಮೆಯ
ನಾಮಕರಣವಿಟ್ಟು ಸಿಂಗರಿಸುವ ಕೆಲಸವೂ ಹೌದು!



ಶಾಂತಾ ಪಾಟೀಲ್.

## ಅರಿವಿನ ಹೊನಲು



ಅರಿವಿನ ಹೊನಲಂತೆ
ಹರಸುವ ಧಾರಾಕಾರ
ಹಾದಿಯ ಮುಳ್ಳನು ಸರಿಸಿ
ಬೇಗುದಿಯ ಕಳೆವ ಶಕ್ತಿ.

ಕರುಣೆ ಕಡಲು
ವ್ಯಕ್ತಿತ್ವ ನಿರ್ಮಾಣದ ಕರ
ಎಡವಿದ ದಾರಿ ಸರಿಪಡಿಸಿ
ಕವಿದ ಮೋಡ ಕಳೆಯುವ ಯುಕ್ತಿ.

ಸೂರ್ಯನಂತೆ ದಿದೀಪ್ಯಮಾನ
ಗುರಿಯ ಪಯಣಕೆ ಚಾಲಕ
ವಿವೇಕತೆಯ ಪೂರ್ಣಿಮಾ
ಸಜ್ಜನಿಕೆಗೆ ರೂವಾರಿ
ಇರಲಿ ಭಯ ಭಕ್ತಿ.

ಸೋಲಿಗೆ ಕಾರಣ ಹೇಳಿ
ಗೆಲುವಿಗೆ ಸಂಭ್ರಮಿಸಿ
ಸಮಾಜದ ಹಿತಚಿಂತಕ
ನೆನೆದರೆ ಜೀವನ ಮುಕ್ತಿ.

ಬಾಳಿಗೆ ಬೆಳಕಾಗಿ
ಭವಿಷ್ಯಕೆ ನಿನ್ನದೇ ಜವಾಬ್ದಾರಿ
ನಿರ್ಮಲ ಮನ ಮಂದಾರ
ತಾತ್ವಿಕ ನಿಲುವಿನ ಭುಕ್ತಿ.

ಜ್ಞಾನಾಮೃತ ಉಣಬಡಿಸಿ
ಸಂಸ್ಕಾರ ನೀಡುವ ರೂವಾರಿ
ತನ್ನ ತಾ ಕರಗಿಸಿದ ಮೇಣ
ಮೌಲ್ಯಗಳಿಗೆ ನಿನ್ನದೇ ಸೂಕ್ತಿ.

ಅನುಭಾವದ ಅಧಿಪತಿ
ಅನುಭವಗಳ ಬಿತ್ತರಿಸಿ
ಸಜ್ಜನಿಕೆಯ ಸಾಕ್ಷೀಕರಿಸಿ
ಪ್ರಾಪಂಚಿಕ ಜ್ಞಾನ ತುಂಬುವ ಗುರುವೆಂಬ ಶಕ್ತಿ.



ರೇಷ್ಮಾ ಕಂದಕೂರ

# ನುಡಿಘನತೆ



ವಟವಟನೆ ಮಾತಾಡಿ ತೋರದಿರು ಪೆದ್ದತನ;
ಕೊಡು ವಿರಾಮವನಿನಿತ ತುಟಿ ತೆರೆವ ಮುನ್ನ.
ಚಿಂತನೆಯ ನೆಲೆಯಿಂದ ನುಡಿದುದಕೆ
ತೂಕವಿದೆ;
ನುಡಿ ಘನತೆ ಅತಿಹಿರಿದು ಮುದ್ದುರಾಮ....

ಮೆದುವಾದ ಸಂವಾದ ಹೆಣೆದ ಹೂಮಾಲೆಯಂತೆ. ಹಿತವಾದ ನುಡಿಗಳು ಬಾಳಲಿ ಬೆಳಕಿನ ಹರಿವಿದ್ದಂತೆ. ನಮ್ಮ ಬಾಯಿಂದ ಹೊರಡುವ ಶಬ್ದಗಳು ನಮ್ಮ ಹಿಡಿತದಲ್ಲಿದ್ದಾಗ ಮನುಜನ ವ್ಯಕ್ತಿತ್ವಕ್ಕೆ ಕಳೆ ಬರುತ್ತದೆ ಅಪ ಶಬ್ದ ಮಾತಾಡಿ ಪರರ ಅವಮಾನಿಸುವ ಭರದಲ್ಲಿ ನಮ್ಮ ವ್ಯಕ್ತಿತ್ವ ನಾವೇ ಹಗುರವಾಗಿಸಿಕೊಳ್ಳುತ್ತೇವೆ. ಸುವಿವೇಕದ ನಡೆ ನುಡಿ ಇತರರಿಗೆ ಅನುಕರಣೆಯ.

ಬಡವನಿರಲಿ ಶ್ರೀಮಂತನಿರಲಿ ನುಡಿ ಸತ್ವಯುತವಾಗಿದ್ದರೆ ಆ ವ್ಯಕ್ತಿಯ ಮರ್ಯಾದೆ ಹೆಚ್ಚುತ್ತದೆ. ಅತಿಯಾದ ತೋರಿಕೆಯ ಮಾತು ನಿಯಂತ್ರಣ ತಪ್ಪಿಸುತ್ತದೆ.

ಒಬ್ಬ ಮನುಷ್ಯನ ಮಾತಿಗೆ ತೂಕ ಬರಬೇಕಾದರೆ ಮಾತುಗಳು ಸಂಕ್ಷಿಪ್ತವಾಗಿದ್ದು ಪರ ಭಾವನೆಯ ಅರಿತು ನಡೆಯುವಂತಿ-ರಬೇಕು. ಕನ್ನಡದಲ್ಲಿ ಒಂದು ಗಾದೆಮಾತಿ-ದೆ "ಮಾತು ಬಲ್ಲವಗೆ ಜಗಳವಿಲ್ಲ ಊಟ ಬಲ್ಲವಗೆ ರೋಗವಿಲ್ಲ"ಅಂತ. ನಮ್ಮ ಚಾ-ರಿತ್ರ್ಯವ ಬಿಂಬಿಸುವ ಮಾತುಗಳು ಮಿತವಾಗಿ ಹಿತವಾಗಿರಬೇಕು. ಅನುಚಿತವಾದ ಮಾತುಗಳು ಅವಮರ್ಯಾದೆ ತರುತ್ತವೆ. ಅಗತ್ಯವಿರದಲ್ಲಿ ಭಾಷಣ ಕೊಡುತ್ತ ,ಇಬ್ಬರ ಮಾತಲ್ಲಿ ನಡುವೆ ತಲೆ ಹಾಕುತ್ತ, ಪರರನ್ನು ಹೀಯಾಳಿಸುವ ಭರದಲ್ಲಿ ನಿಂತಾಗ ಮಾತುಗಳು ಗಣನೆಗೆ ಬರುವುದಿಲ್ಲ. ಪ್ರಜ್ಞಾವಂತರು ಅವರ ಮಾತಿಗೆ ಉತ್ತರಿಸುವುದಿಲ್ಲ.

ಹಿಂದೆ ಒಂದು ಕಾಲದಲ್ಲಿ ಆನೆಯು ತನ್ನ ಪಾಡಿಗೆ ಹೋಗುತ್ತಿದ್ದಾಗ ನರಿಯು ಆನೆಗೆ ಅಡ್ಡಲಾಗಿ ಬಂತಂತೆ ಆನೆಯ ಅದನ್ನು ನೋಡಿಯೂ ಅದನ್ನು ಪರಿಗಣಿಸದೆ ಮುಂದೆ ಸಾಗಿತು. ಇದನ್ನು ನೋಡಿ ನರಿಗೆ ಸಿಟ್ಟು ಬಂದಿತು. ಆಗ ತನಗೆ ಹೆದರಿ ಆನೆ ನಡೆಯುತ್ತಿದೆ ಎಂದು ಎಲ್ಲರಲ್ಲೂ ಜಂಬ ಕೊಚ್ಚಿ ಹೇಳತೊಡಗಿತು. ಅದರ ಕಿರುಚಾಟದಿಂದ ಆನೆಗೆ ಯಾವ ನಷ್ಟವಿರಲಿಲ್ಲ. ಆದರೆ ಅದರ ಗರ್ವಭಂಗ ಮಾಡಲು ಅದಕ್ಕೆ ಸಮಯವೂ ತಗಲುತ್ತಿರಲಿಲ್ಲ. ಆದರೂ ಸುಮ್ಮನಿದ್ದು ತನ್ನ ವ್ಯಕ್ತಿತ್ವಕ್ಕೆ ಚ್ಯುತಿ ಬರದಂತೆ ನಡೆದುಕೊಂಡಿತು. ಹೀಗೆ ಆಡುವವರ ಪ್ರತಿ ಮಾತಿಗೂ ಉತ್ತರಿಸಬೇಕಾದ ಅವಶ್ಯಕತೆ ಇರುವುದಿಲ್ಲ.

ಮೌನ ಮಾತಿಗಿಂತ ಹಿರಿದು ಅದು ಬೀಸುವ ಚಾವಟಿ ಮಾತಿನಲ್ಲಿರುವುದಿಲ್ಲ. ನಮ್ಮ ಮಾತುಗಳನ್ನು ಧನದಂತೆ ಬಳಸಬೇಕು .ಆಯವ್ಯಯ ಇಲ್ಲಿಯೂ ಅನ್ವಯಿಸುತ್ತದೆ. ಕನಕನು ಹರಿಯ ಬಾಗಿಲಿಗೆ ದರ್ಶನಕ್ಕಾಗಿ ಬಂದಾಗ ನಯವಿರದ ಮಾತಿನಿಂದ ಅವಮರ್ಯಾದೆ ತೋರುತ್ತ ತಮ್ಮ ಎಲ್ಲೆ ಗಳ ಮೀರಿ ಬಾಗಿಲ ಮುಚ್ಚಿ ಅಂತರಸ್ಥ ನನ್ನು ಅಂತರ ರ್ಧಿಸಿದರು. ಆಗ ಆತ್ಮಚಿಂತನೆಗೆ ವಿಮುಖರಾದವರ ಅವಮಾನಕ್ಕೆ ಉತ್ತರಿಸಲು ಭಗವಂತನೇ ಸಾಕ್ಷಾತ್ ಪ್ರಕಟನಾದನು .ನಮ್ಮ ಸವಿನುಡಿಗಳು ಸೂಕ್ಷ್ಮ ಸಂವೇದನೆಯ ಸಂವಹನದಂತೆ ಇರಬೇಕು.

ನಯವಿರದ ಮಾತುಗಳು ವ್ಯಕ್ತಿತ್ವಕ್ಕೆ ಭೂಷಣವಾಗಲಾರವು. ಯಾರನ್ನೂ ಅವಮಾನಿಸುವ ಭರದಲ್ಲಿ ಒರಟ ನುಡಿಗಳ ನಾಡುವುದು ಶೋಭೆ ತರುವುದಿಲ್ಲ. ಮಾತುಗಳು ಅರಿವಿನ ಕನ್ನಡಿಯಂತೆ ಇರಬೇಕು ಅನಾವಶ್ಯಕ ನುಡಿಗಳಿಗೆ ಕಡಿವಾಣ ಹೇರಿದಾಗ ಗಾಂಭೀರ್ಯದ ನುಡಿ ನಮ್ಮದಾಗಿ ನಮ್ಮ ಸಂವಹನ ಸಾರ್ಥಕ್ಯ ಪಡೆದು ವ್ಯಕ್ತಿತ್ವಕ್ಕೆ ಘನತೆ ಬರುತ್ತದೆ.. ಅಲ್ಲವೇ?..



ಆರತಿ ಏನ್ ರಾವ್

# ಜಸ್ಟ್ ಮೂ ಆನ್



ಅವಕಾಶಕ್ಕಾಗಿ ಯಾವತ್ತು ಯಾರ ಬಳಿನೂ ಅಂಗಲಾಚಬೇಡಿ ಯಾಕೆದಂದರೆ ಇಲ್ಲಿ ಎಲ್ಲರೂ ಅವಕಾಶವಾದಿತನದ ಸೆರಗ ಹೊತ್ತವರೇ ಇನ್ಪುಲೇಷನ್ ಇರಬೇಕು ಇಲ್ಲಾ ದುಡ್ಡು ಇರಬೇಕು ಅಂತವರನಾ ಮಾತ್ರ ಜನ ಬೇಗ ಸ್ವಿಕರಸತಾರೆ. ಇಲ್ಲಿ ಹಿಂದೆ ಇರೋರಾನ ಮುಂದಕ್ಕೆ ಕೈಹಿಡಿಯೋದಿರಲಿ ತಿರುಗಿ ಸಹ ನೋಡೋದಿಲ್ಲ.

ಈ ಬಣ್ಣದ ಜಗತ್ತಿನ ಬದುಕಲ್ಲಿ ಬಣ್ಣ ಬಣ್ಣದ ಮಾತುಗಳನ್ನ ಆಡತಾ ಮತ್ತೊಬ್ಬರ ಬಾಲ ಹಿಡಿದು ಅವರ ಹೇಳಿದಾಗೆ ಕೇಳಿಕೋಳತಾ ತಲೆ ಅಲ್ಲಾಡಿಸುವ ಪಾಪದ ಜನ ಸಿಕ್ಕರಂತು ಮುಗಿದೆ ಹೋಯಿತು. ತಮ್ಮ ಕೆಲಸ ಮುಗಿಯೋವರಗೂ ನಿಮ್ಮನ್ನ ಎಷ್ಟು ಸಾಧ್ಯವಾಗುತ್ತೊ ಅಷ್ಟು ಬಳಿಸೊಕೊದಕ್ಕೆ ಪ್ರಯತ್ನಿಸುತ್ತಿರತಾರೆ . ಕೆಲವರಂತು ತಮ್ಮ ಬೆಳೆಯ ಬೆಸಿಸಲು ನೀರು ಎಷ್ಟು ಬೇಕಾಗಬಹುದು ಅದಕೆ ಬಿಸಿನಿರಾದರೆ ಸೂಕ್ತನೋ ಅಥವಾ ತುಂಬಾ ತಣ್ಣಗಿರುವ ನೀರು ಬೇಕಾಗಬಹುದೊ ಎಂದು ಅಂ-ದಾಜಿಸಿ ಲೆಕ್ಕ ಮಾಡತಾರೆ ಇದು ಒಂಥರಾ ಕೆಟಗಿರಿಯ ಜನ ಆದರೆ ಮನುಷ್ಯನ ಸ್ವಭಾವ ಮಾನವಿಯತೆ ವ್ಯಕ್ತಿಯ ಪ್ರಬುದ್ದತೆಯನ್ನು ಗೌರವಿಸುವ ಸಣ್ಣ ಸೌಜನ್ಯವು ಇರುವುದಿಲ್ಲ.

ಇನ್ನೂ ಕೆಲವೊಂದಿಷ್ಟು ಜನ ಹೇಗೆ ಅಂದರೆ ಅಧಿಕಾರ ಅನ್ನೊ ಅಮಲಿನ ಗರ್ವದಿಂದ ಬದಕತಿರತಾರೆ ಬಹುಶಃ ಹಿಂದೆ ತಾವು ನಡೆದುಕೊಂಡ ಬಂದ ದಾರಿ ಮರತೆ ಹೋಗಿರುತ್ತೊ ಏನೋ ನಾವು ಇರೋ ಸಂಧರ್ಭ ಎಂತಹದ್ದೆ ಆಗಲಿ ಎಷ್ಟೋ ಉನ್ನತ ಅಧಿಕಾರ ಪದವಿಯಲ್ಲೇ ಇರಲಿ ಕರ್ತವ್ಯಕ್ಕೆ ಲೋಪವಾಗದಂತೆ ನಡೆದುಕೊಳ್ಳಬೇಕೆ ಹೊರತು ಅಧಿಕಾರವನ್ನ ತಮ್ಮ ಕುಹಿಕತೆಗೆ ಎಡೆಗೆ ಮಾಡಿಕೊಡಬಾರದು. ಬರತಾ ಬರತಾ ಮನುಷ್ಯರಲ್ಲಿ ಮಾನವೀಯತೆ ಅನ್ನೊ ಪದಕ್ಕಂತು ಅರ್ಥಕಾಣಸಿಗುವುದಿಲ್ಲ.

ಸ್ವಾರ್ಥ ಪರತೆ ಅನ್ನೊದು ತುಂಬಿ ತುಳಕಾಡತಾ ಇದೆ. ಒಳ್ಳೆವರನ್ನ ಮತ್ತೆ ಒಳ್ಳೆತನವನ್ನ ನಾವು ಇನ್ನೂ ಮುಂದೆ ಪುಸ್ತಕದಲ್ಲಿ ಮಾತ್ರ ಓದೋದಕ್ಕೆ ಸಾಧ್ಯವಾಗಬಹುದೋ? ಏನೋ ತುಂಬಾ ಒಳ್ಳೆಯವರಂತಾ ನಟಿಸೋ ಜನ ಎದುರಿಗೆ ಇದ್ದವರು ಮೂರ್ಖ ಅಂತ ಅಂದುಕೊಂಡು ಬಿಟ್ಟಿರತಾರೋ ಏನೋ ಏನೆ ಆಗಲಿ ಹೇಗೆ ಆಗಲಿ ನಾವು ಸ್ವಾಭಿಮಾನನ ಬಿಟ್ಟು ಬದುಕು ನಡೆಸಬಾರದು .ಎಂತದ್ದೆ ಕಠಿಣ ಪರಿಸ್ಥಿತಿ ಇರಲಿ ಅದನ ಮೆಟ್ಟಿ ನಡಿತಾನೆ ಇರಬೇಕು ನಿಮ್ಮಲ್ಲಿ ಪ್ರತಿಭೆ ಇದೆ ಅನ್ನೊದಾದರೆ ಅವಕಾಶಗಳು ತನ್ನಿಂದ ತಾನೆ ಹುಡುಕಿಕೊಂಡು ನಿಮ್ಮ ಬಳಿ ಬಂದೆ ಬರತಾವೆ ಅದಕೆ ಅವಕಾಶಕ್ಕಾಗಿ ಯಾರ ಬಳಿಯು ಅಂಗಲಾಚಬೇಡಿ.

ಅಭಿಲಾಷೆ ಇಟ್ಟಕೊಂಡು ಮುಂದೆ ನಡಿರಿ ಮಾಡತಿರೋ ಕೆಲಸನಾ ಶ್ರದ್ದೆಯಿಂದ ಮಾಡಿ ಯಾರ ಮೇಲೂ ಡಿಪೆಂಡ್ ಆಗಿ ಬದುಕಬೇಡಿ ಯಾರೋ ನಮ್ಮನ್ನ ಕೈ ಹಿಡಿದು ಎಬ್ಬಿಸತಾರೆ ಅನ್ನೊ ಭ್ರಮೇಲಂತು ಜೀವಿಸಲೇ ಬೇಡಿ. ಬದುಕು ನಿರಂತರವಾಗಿ ಹರಿಯುವ ನೀರಾಗಲಿ ಏನೇ ಆದರೂ ಜಸ್ಟ್ ಮೂ ಆನ್ ........

ರಜಿಯಾ ಕೆ ಭಾವಿಕಟ್ಟಿ

# ಗೆಳೆತನ: ಮಾನವೀಯತೆಯ ಮಹಾಕಾವ್ಯ

ಮಾನವ ಬದುಕಿನ ಅತಿ ಸುಂದರ ಆವಿಷ್ಕಾರಗಳಲ್ಲಿ ಗೆಳೆತನವೂ ಒಂದು. ಅದು ರಕ್ತಸಂಬಂಧಗಳಿಂದ ಹುಟ್ಟಿದ ಬಂಧನವಲ್ಲ; ಹೃದಯಗಳ ಸಾಮರಸ್ಯದಿಂದ ಅರಳಿದ ಭಾವಲೋಕ. ಜನ್ಮವು ನಮಗೆ ಬಂಧುಗಳನ್ನು ನೀಡಬಹುದು; ಆದರೆ ಜೀವನವು ನಮ್ಮ ವ್ಯಕ್ತಿತ್ವಕ್ಕೆ ತಕ್ಕ ಗೆಳೆಯರನ್ನು ಉಡುಗೊರೆಯಾಗಿ ನೀಡುತ್ತದೆ. ಆದ್ದರಿಂದಲೇ ಗೆಳೆತನವು ಪ್ರಕೃತಿಯ ಅತ್ಯಂತ ಅಪೂರ್ವ ಅನುಗ್ರಹಗಳಲ್ಲಿ ಒಂದಾಗಿದೆ.

ಗೆಳೆತನವು ಕೊಡು-ಕೊಳ್ಳುವ ವ್ಯವಹಾರವಲ್ಲ; ಲಾಭ-ನಷ್ಟಗಳ ಲೆಕ್ಕಾಚಾರವೂ ಅಲ್ಲ. ಅದು ಅಧಿಕಾರದ ಅಹಂಕಾರದಿಂದ ಆಳುವ ಸಂಬಂಧವಲ್ಲ; ಪ್ರೀತಿಯ ವಿನಯದಿಂದ ಬೆಸೆಯುವ ಅನುರಾಗ ಬಂಧ. ಎರಡು ಮನಸ್ಸುಗಳು ಪರಸ್ಪರ ವಿಶ್ವಾಸ, ಗೌರವ ಮತ್ತು ನಿಸ್ವಾರ್ಥತೆಯ ಸೇತುವೆಯ ಮೇಲೆ ಭೇಟಿಯಾದಾಗ ಹುಟ್ಟುವ ಅದ್ಭುತ ಅನುಭವವೇ ನಿಜವಾದ ಸ್ನೇಹ.

ಸ್ನೇಹಕ್ಕೆ ಜಾತಿಯ ಗೋಡೆಗಳಿಲ್ಲ, ಮತದ ಬೇಲಿಗಳಿಲ್ಲ, ವರ್ಣದ ವಿಭಜನೆಗಳಿಲ್ಲ, ಲಿಂಗದ ಮಿತಿಗಳಿಲ್ಲ. ಅದು ಮಾನವೀಯತೆಯ ವಿಶಾಲ ಆಕಾಶದಲ್ಲಿ ಹಾರುವ ಮುಕ್ತ ಹಕ್ಕಿ. ಎಲ್ಲ ರೀತಿಯ ಭೇದಗಳನ್ನು ಮೀರಿ "ನಾವು" ಎಂಬ ಭಾವವನ್ನು ಕಟ್ಟಿಕೊಡುವ ಅದ್ಭುತ ಶಕ್ತಿ ಸ್ನೇಹಕ್ಕಿದೆ. ಆದ್ದರಿಂದಲೇ ನಾಗರಿಕತೆಯ ಬೆಳವಣಿಗೆಯಲ್ಲಿ ಸ್ನೇಹವು ಸಾಮಾಜಿಕ ಸಾಮರಸ್ಯದ ಜೀವನಾಡಿಯಾಗಿದೆ.



ನಿಜವಾದ ಗೆಳೆಯನು ನಮ್ಮ ಯಶಸ್ಸಿಗೆ ಚಪ್ಪಾಳೆ ತಟ್ಟುವವನಷ್ಟೇ ಅಲ್ಲ; ನಮ್ಮ ವೈಫಲ್ಯದಲ್ಲಿ ಹೆಗಲಾಗಿ ನಿಲ್ಲುವವನು. ನಮ್ಮ ಕಣ್ಣೀರಿನ ಭಾಷೆಯನ್ನು ಅರ್ಥಮಾಡಿಕೊಳ್ಳುವವನು, ಮಾತುಗಳಿಗಿಂತ ಮೌನದ ಅರ್ಥವನ್ನು ಗ್ರಹಿಸುವವನು, ನಮ್ಮ ತಪ್ಪುಗಳನ್ನು ಮುಚ್ಚಿಡದೆ ತಿದ್ದುವ ಧೈರ್ಯ ಹೊಂದಿರುವವನೇ ನಿಜವಾದ ಗೆಳೆಯ. ಆತ ನಮ್ಮ ಜೀವನದ ಕನ್ನಡಿಯೂ ಹೌದು, ದಾರಿದೀಪವೂ ಹೌದು.

ಗೆಳೆತನದ ಮೊದಲ ಹೆಜ್ಜೆ ವಿನಯ. ಅಹಂಕಾರವು ಸಂಬಂಧಗಳನ್ನು ಒಡೆಯುತ್ತದೆ; ವಿನಯವು ಅವನ್ನು ಬೆಸೆಯುತ್ತದೆ. ಸ್ವಾರ್ಥವು ಮನಸ್ಸುಗಳನ್ನು ದೂರ ಮಾಡುತ್ತದೆ; ನಿಸ್ವಾರ್ಥ ಪ್ರೀತಿಯು ಅವನ್ನು ಒಂದಾಗಿಸುತ್ತದೆ. ದ್ವೇಷವು ಹೃದಯವನ್ನು ಬರಿದಾಗಿಸಿದರೆ, ಸ್ನೇಹವು ಅದರಲ್ಲಿ ವಸಂತವನ್ನು ಅರಳಿಸುತ್ತದೆ. ಆದ್ದ-ರಿಂದ ಸ್ನೇಹವು ಕೇವಲ ಭಾವನೆಯಲ್ಲ; ಅದು ವ್ಯಕ್ತಿತ್ವವನ್ನು ಪರಿಷ್ಕರಿಸುವ ಮೌಲ್ಯಶಿಕ್ಷಣ.

ಗಿಡದಲ್ಲಿ ಅರಳಿದ ಹೂವು ತನ್ನ ಪರಿಮಳವನ್ನು ತನ್ನೊಳಗೆ ಮಾತ್ರ ಉಳಿಸಿಕೊಳ್ಳುವುದಿಲ್ಲ; ಸುತ್ತಲಿನ ವಾತಾವರಣವನ್ನೇ ಸುಗಂಧಮಯಗೊಳಿಸುತ್ತದೆ. ಅದೇ ರೀತಿ ನಿಜವಾದ ಸ್ನೇಹವೂ ತನ್ನ ಸಾನ್ನಿಧ್ಯದಿಂದ ಬದುಕಿಗೆ ಸೌಂದರ್ಯವನ್ನು ನೀಡುತ್ತದೆ. ಮಗುವಿನ ಮುಗ್ಧ ನಗುವಿನಷ್ಟು ನಿರ್ಮಲ, ಪೂರ್ಣಿಮೆಯ ಚಂದಿರನ ಬೆಳಕಿನಷ್ಟು ಶಾಂತ, ಚೈತ್ರದ ಕೋಗಿಲೆಯ ಇಂಚರದಷ್ಟು ಮಧುರವಾದ ಅನುಭವವೇ ಗೆಳೆತನ.

ಇಂದು ವಿಜ್ಞಾನ ಮತ್ತು ತಂತ್ರಜ್ಞಾನ ಜಗತ್ತನ್ನು ಅಂಗೈಯಲ್ಲಿ ತಂದಿವೆ. ಸಾವಿರಾರು ಸಂಪರ್ಕಗಳು ಕ್ಷಣಾರ್ಧದಲ್ಲಿ ಸಿಗುತ್ತವೆ. ಆದರೆ ಹೃದಯವನ್ನು ಸ್ಪರ್ಶಿಸುವ ಸಂಬಂಧಗಳು ವಿರಳವಾಗುತ್ತಿವೆ. ಪರದೆಯ ಮೇಲಿನ ಪರಿಚಯಗಳಿಗಿಂತ ಮನದಾಳದಲ್ಲಿ ನೆಲೆಸುವ ಸ್ನೇಹವೇ ಮನುಷ್ಯನನ್ನು ಸಂಪನ್ನನನ್ನಾಗಿಸುತ್ತದೆ. ಆದ್ದರಿಂದ ಸಂಬಂಧಗಳ ಸಂಖ್ಯೆಯನ್ನು ಹೆಚ್ಚಿಸುವುದಕ್ಕಿಂತ, ಸಂಬಂಧಗಳ ಸಾರ್ಥಕತೆಯನ್ನು ಉಳಿಸಿಕೊಳ್ಳುವುದು ಇಂದಿನ ಸಮಾಜದ ಅಗತ್ಯವಾಗಿದೆ.

ವಿದ್ಯಾರ್ಥಿ ಜೀವನದಲ್ಲಿ ಗೆಳೆಯರ ಆಯ್ಕೆಯೇ ಭವಿಷ್ಯದ ದಿಕ್ಕನ್ನು ನಿರ್ಧರಿಸುತ್ತದೆ. ಸಜ್ಜನ ಸ್ನೇಹಿತನು ಗುರಿಯತ್ತ ಮುನ್ನಡೆಯುವ ಶಕ್ತಿಯಾಗುತ್ತಾನೆ; ದುರ್ಜನ ಸ್ನೇಹ ಜೀವನದ ಹಾದಿಯನ್ನು ತಪ್ಪಿಸಬಲ್ಲದು. ಹೀಗಾಗಿ ಸ್ನೇಹವನ್ನು ಆಯ್ಕೆ ಮಾಡುವಾಗ ವ್ಯಕ್ತಿಯ ಮೌಲ್ಯಗಳು, ನಡತೆ, ಮಾನವೀಯತೆ ಮತ್ತು ಆದರ್ಶಗಳನ್ನು ಮಾನದಂಡವಾಗಿಸಬೇಕು.

ಜೀವನದ ಸಂಜೆಯ ವೇಳೆಯಲ್ಲಿ ಮನುಷ್ಯನು ಹಿಂದಿರುಗಿ ನೋಡುವುದು ಸಂಪಾದಿಸಿದ ಆಸ್ತಿಯನ್ನಲ್ಲ; ಸಂಗ್ರಹಿಸಿದ ಹುದ್ದೆಗಳನ್ನಲ್ಲ; ತನ್ನೊಂದಿಗೆ ನಡೆದ ಜೀವಂತ ನೆನಪುಗಳನ್ನು. ಆ ನೆನಪುಗಳ ಮಧ್ಯೆ ಚಿರಕಾಲ ಹಸಿರಾಗಿರುವುದು ನಿಷ್ಕಲ್ಮಷ ಗೆಳೆತನವೇ. ಅದು ನೆನಪಿನ ಪುಟಗಳಲ್ಲಿ ಒಣಗದ ಹೂವು; ಕಾಲದ ಪ್ರವಾಹದಲ್ಲೂ ಮಸುಕಾಗದ ಸುಗಂಧ.

ಆದ್ದರಿಂದ ಗೆಳೆತನವನ್ನು ಕಾಪಾಡೋಣ. ಅಹಂಕಾರಕ್ಕಿಂತ ಆತ್ಮೀಯತೆಯನ್ನು, ಸ್ವಾರ್ಥಕ್ಕಿಂತ ಸಹೃದಯತೆಯನ್ನು, ದ್ವೇಷಕ್ಕಿಂತ ಪ್ರೀತಿಯನ್ನು, ದಾನವತೆಗಿಂತ ಮಾನವೀಯತೆಯನ್ನು ಬೆಳೆಸೋಣ. ಏಕೆಂದರೆ ಮನುಷ್ಯನ ಬದುಕನ್ನು ಸುಂದರಗೊಳಿಸುವ ಮಹಾಕಾವ್ಯವಿದ್ದರೆ, ಅದರ ಮೊದಲ ಅಧ್ಯಾಯವೇ ಗೆಳೆತನ.



ಎ.ಎಂ.ಪಿ ವೀರೇಶಸ್ವಾಮಿ
ಹೊಳಗುಂದಿ. 9008527708

# 2026–27ನೇ ಸಾಲಿನ ವಿಕಸಿತ ಭಾರತ ಜೀರಾಮ್‌ಜೀ ಕ್ರಿಯಾ ಯೋಜನೆ ತಯಾರಿಕೆ

# ಬಹದ್ದೂರಬಂಡಿ ಗ್ರಾಮ ಪಂಚಾಯತಿಯಲ್ಲಿ ಜರುಗಿದ ವಿಶೇಷ ಗ್ರಾಮಸಭೆ

ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: 2026–27ನೇ ಸಾಲಿನ ವಿಕಸಿತ ಭಾರತ ಜೀರಾಮ್‌ಜೀ (ಎಂಜಿಎನ್‌ಆರ್‌ಇಜಿಎ) ಕ್ರಿಯಾ ಯೋಜನೆ ಸಿದ್ಧಪಡಿಸುವ ಸಂಬಂಧ ಕೊಪ್ಪಳ ತಾಲೂಕಿನ ಬಹದ್ದೂರಬಂಡಿ ಗ್ರಾಮ ಪಂಚಾಯತಿಯಲ್ಲಿ ಮಂಗಳವಾರ (ಆ. 4ರಂದು) ವಿಶೇಷ ಗ್ರಾಮಸಭೆ ನಡೆಯಿತು.**

ಬಹದ್ದೂರಬಂಡಿ ಗ್ರಾಮ ಪಂಚಾಯತಿ ಆವರಣದಲ್ಲಿ ನಡೆದ ಸಭೆಯಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಬಸವರಾಜ ಕಿರ್ದಿ ಅವರು ಮಾತನಾಡಿ, ರೈತರು ಹಾಗೂ ಕೂಲಿಕಾರರ ಆರ್ಥಿಕ ಸದೃಢತೆಗೆ ವಿಕಸಿತ ಭಾರತ ಜೀರಾಮ್‌ಜೀ ಯೋಜನೆ ಗ್ರಾಮೀಣ ಭಾಗಕ್ಕೆ ವರದಾನವಾಗಲಿದೆ. ಗ್ರಾಮ ಪಂಚಾಯತಿ, ಕೃಷಿ, ತೋಟಗಾರಿಕೆ, ಅರಣ್ಯ, ರೇಷ್ಮೆ ಸೇರಿದಂತೆ ವಿವಿಧ ಇಲಾಖೆಗಳ ಮೂಲಕ ವೈಯಕ್ತಿಕ ಹಾಗೂ ಸಾರ್ವಜನಿಕ ಕಾಮಗಾರಿಗಳನ್ನು ಕೈಗೊಳ್ಳಲು ಅವಕಾಶವಿದ್ದು, ರೈತರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ತಿಳಿಸಿದರು.



ತಾಲೂಕು ಐಇಸಿ ಸಂಯೋಜಕ ದೇವರಾಜ ಪತ್ತಾರ ಅವರು ಮಾತನಾಡಿ, ಗ್ರಾಮೀಣ ಭಾಗದ ಕೂಲಿಕಾರರು ಗುಳೆ ಹೋಗುವುದನ್ನು ತಡೆದು ಸ್ಥಳೀಯವಾಗಿ ಒಂದು ಕುಟುಂಬಕ್ಕೆ 125 ದಿನಗಳ ಉದ್ಯೋಗ ಒದಗಿಸುವುದು ಯೋಜನೆಯ ಮುಖ್ಯ ಉದ್ದೇಶವಾಗಿದೆ ಎಂದರು. ಪುರುಷ ಮತ್ತು ಮಹಿಳೆಯರಿಗೆ ಸಮಾನ ಕೂಲಿ ನಿಗದಿಪಡಿಸಲಾಗಿದ್ದು, ಜಲ ಸಂರಕ್ಷಣೆ, ನೀರಾವರಿ, ಅಂತರ್ಜಲ ಮರುಪೂರಣ, ಜಲಾನಯನ ಪ್ರದೇಶ ಅಭಿವೃದ್ಧಿ ಹಾಗೂ ಜಲಮೂಲಗಳ ಪುನಶ್ಚೇತನ ಕಾಮಗಾರಿಗಳಿಗೆ ಆದ್ಯತೆ ನೀಡಲಾಗಿದೆ ಎಂದು ತಿಳಿಸಿದರು.

ಪ್ರಸ್ತುತ ಯೋಜನೆಯಡಿ ಪ್ರತಿ ಮಾನವ ದಿನಕ್ಕೆ 382 ಕೂಲಿ ನಿಗದಿಪಡಿಸಲಾಗಿದ್ದು, ಜಾನುವಾರು ಶೆಡ್, ಮೇಕೆ ಶೆಡ್, ಕೃಷಿಹೊಂಡ, ಬದು ನಿರ್ಮಾಣ, ಕೋಳಿ ಶೆಡ್ ಸೇರಿದಂತೆ 318 ವಿಧದ ವೈಯಕ್ತಿಕ ಕಾಮಗಾರಿಗಳನ್ನು ಕೈಗೊಳ್ಳಲು ಅವಕಾಶವಿದೆ. ಜಮೀನು ಇಲ್ಲದವರು ಗ್ರಾಮ ಪಂಚಾಯತಿ ಕೈಗೊಳ್ಳುವ ಸಾಮೂಹಿಕ ಕಾಮಗಾರಿಗಳಲ್ಲಿ ಭಾಗವಹಿಸಿ ಉದ್ಯೋಗ ಪಡೆದು ಆರ್ಥಿಕವಾಗಿ ಸಬಲರಾಗಬೇಕು. ಹೊಸದಾಗಿ ನೋಂದಾಯಿಸಿದ ಕುಟುಂಬಗಳಿಗೆ ಉದ್ಯೋಗ ಖಾತರಿ ಕಾರ್ಡ್‌ಗಳನ್ನು ವಿತರಿಸಲಾಗುವುದು ಎಂದರು.

ಸಂಜೀವಿನಿ ಯೋಜನೆಯ ತಾಲೂಕು ಕಾರ್ಯಕ್ರಮ ವ್ಯವಸ್ಥಾಪಕ ಸುನೀಲ್ ಅವರು ಮಾತನಾಡಿ, ಸಂಜೀವಿನಿ ಸಂಘದ ಮಹಿಳೆಯರು ವೈಯಕ್ತಿಕ ಕಾಮಗಾರಿಗಳಿಗೆ ಆದ್ಯತೆ ನೀಡಿ ಯೋಜನೆಯ ಸೌಲಭ್ಯಗಳನ್ನು ಪಡೆದು ಶಾಶ್ವತ ಆದಾಯ ಗಳಿಸಬೇಕು ಎಂದು ಸಲಹೆ ನೀಡಿದರು.

ಗ್ರಾಮ ಪಂಚಾಯತಿ ಆಡಳಿತಾಧಿಕಾರಿ ನಾಗರತ್ನ ಅಧ್ಯಕ್ಷತೆ ವಹಿಸಿದ್ದರು. ಪಶುವೈದ್ಯಾಧಿಕಾರಿ ವಿನಯ ಅಂಗಡಿ, ತಾಂತ್ರಿಕ ಸಹಾಯಕ ಗುರುರಾಜ, ಶ್ರೀ ಟಿಪ್ಪು ಸುಲ್ತಾನ ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟದ ಅಧ್ಯಕ್ಷೆ ರತ್ನಮ್ಮ ಹೊಸಳ್ಳಿ, ಎಂಬಿಕೆ ಶಕುಂತಲಾ, ಸಖಿ ಚೆನ್ನಮ್ಮ, ಗ್ರಾಮ ಪಂಚಾಯತಿ ಸಿಬ್ಬಂದಿಗಳಾದ ಮೆಹಬೂಬ, ಕನಕರಾಯ, ಗ್ರಾಮ ಕಾಯಕ ಮಿತ್ರ ಭಾಗ್ಯ ಹಾದಿಮನಿ, ರೈತರು, ಸಂಜೀವಿನಿ ಯೋಜನೆಯ ಒಕ್ಕೂಟದ ಮಹಿಳೆಯರು, ಕೃಷಿ ಗ್ರಾಮಸ್ಥರು, ಕಾಯಕ ಬಂಧುಗಳು ಹಾಗೂ ಗ್ರಾಮಸ್ಥರು ಸಭೆಯಲ್ಲಿ ಭಾಗವಹಿಸಿದ್ದರು.


# AFFIDAVIT

SHIVARAJ, RESIDING AT: GINIGERA TQ DIST: KOPPAL-583228 DO HEREBY SOLEMNLY AFFIRM AND STATE ON OATH AS FOLLOWS:-



1. I am joining 09.05.2002 in BRO-GREF (Indian Army) my Service Registered Nomination my son name in My SR mentioned as Prajval but he original all records mention her name in Prajwal Naik S/o Shivaraj So please Confirmed my Son name as Prajwal Naik S/o Shivaraj DOB 17.01.2007 And Correction My Service records my son name Prajwal Naik S/o Shivaraj.

Facts stated herein above information are true and correct to the best of my knowledge belief and information.

"Thanking You"
Date: 05/08/2026.
DEPONENT
Place: Ginigera.
SHIVARAJ.


# ರಕ್ತದಾನದಿಂದಾಗಿ ಇತರೆ ಜೀವಗಳನ್ನು ಉಳಿಸಲು ಸಾಧ್ಯ : ಗುರುರಾಜ ಹೊನ್ನಾವರ

ಅ.ಶ. ಸುದ್ದಿ ಅಂಕೋಲಾ

**ಅಂಕೋಲಾ: ಸಮಾಜದಲ್ಲಿ ಎಲ್ಲ ದಾನಗಳನ್ನು ಮೀರಿದ್ದು ರಕ್ತದಾನ. ಇಂದಿನ ವೇಗದ ಜೀವನದಲ್ಲಿ ಅಪಘಾತಗಳು, ಶಸ್ತ್ರಚಿಕಿತ್ಸೆಗಳು, ರಕ್ತ ಹೀನತೆ ಹಾಗೂ ಹೆರಿಗೆಯಂತಹ ಸಂದರ್ಭಗಳಲ್ಲಿ ಸಮಯಕ್ಕೆ ಸರಿಯಾಗಿ ದೊರೆಯುವ ರಕ್ತವೇ ನಿಜವಾದ ಸಂಜೀವಿನಿಯಾಗಿದೆ ಎಂದು ಲಯನ್ಸ ಕ್ಲಬ್‌ನ ರಕ್ತದಾನ ವಿಭಾಗದ ಎಂ.ಜೆ.ಎಫ್ ಗುರುರಾಜ ಹೊನ್ನಾವರ ಹೇಳಿದರು.**

ಪಟ್ಟಣದ ಕೆಎಲ್‌ಇ ಸಂಸ್ಥೆ, ಅಂಕೋಲಾ ಲಯನ್ಸ ಕ್ಲಬ್ ಕರಾವಳಿ ಹಾಗೂ ಜಿಲ್ಲಾ ಕುಟುಂಬ ಕಲ್ಯಾಣ ಇಲಾಖೆ ಕಾರವಾರದ ಆಶ್ರಯದಲ್ಲಿ ಕೆ.ಎಲ್.ಇ ಸಮೂಹ ಸಂಸ್ಥೆಯ ಗೌರವಾಧ್ಯಕ್ಷ ಡಾ. ಪ್ರಭಾಕರ ಕೋರೆಯವರ 79ನೇ ಜನ್ಮದಿನದ ದಿನಾಚರಣೆಯ ನಿಮಿತ್ತ ಆಯೋಜಿಸಲಾದ ಹತ್ತನೇ ರಕ್ತದಾನ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.



ಕಾರವಾರ ರಕ್ತ ನಿಧಿ ಕೇಂದ್ರದ ವೈದ್ಯಾಧಿಕಾರಿಡಾ. ಸುಪ್ರಿಯಾ ಸಾವಂತ, ಲಯನ್ಸ ಕ್ಲಬ್ ಕರಾವಳಿಯ ಅಧ್ಯಕ್ಷ ಜಿ.ಆರ್. ತಾಂಡೇಲ, ಸ್ಥಳೀಯ ಸಮೂಹ ಸಂಸ್ಥೆಗಳ ಕಾರ್ಯದರ್ಶಿ ಡಾ. ಮಿನಲ್ ನಾರ್ವೆಕರ, ಲಯನ್ಸ್ ಕಾರ್ಯದರ್ಶಿ ಸುಧೀರ ನಾಯ್ಕ ಮಾತನಾಡಿದರು.

26 ಸಲ ರಕ್ತದಾನ ಮಾಡಿ ಸಮಾಜಕ್ಕೆ ಮಾದರಿಯಾದ ದಂತ ವೈದ್ಯ ಡಾ. ಕರುಣಾಕರ ನಾಯ್ಕ ಅವರನ್ನು ಲಯನ್ಸ್ ಹಿರಿಯ ಸದಸ್ಯರಾದ ದುರ್ಗಾನಂದ ದೇಸಾಯಿ ಸನ್ಮಾನಿಸಿದರು. ನಿವೃತ್ತ ಗ್ರಂಥಪಾಲಕ ಮಹಾಂತೇಶ ರೇವಡಿ ಪರಿಚಯಿಸಿದರು. ಪ್ರಾಚಾರ್ಯ ಡಾ. ವಿನಾಯಕ ಜಿ ಹೆಗಡೆಸ್ವಾಗತಿಸಿದರು.ಉಪನ್ಯಾಸಕ ಮಂಜುನಾಥ ಇಟಗಿ ನಿರೂಪಿಸಿದರು.ನರ್ಸಿಂಗ್ ಕಾಲೇಜಿನ ಪ್ರಾಚಾರ್ಯ ಡಾ. ಗಂಗಾಧರ ಇಸರಣ್ಣನವರ ವಂದಿಸಿದರು. ಒಟ್ಟು 21 ಜನರು ರಕ್ತದಾನ ಮಾಡಿದರು.

# ಜೋಶಿ–ಕಂಗನಾ ಹೇಳಿಕೆ ಖಂಡನೆ: ಮಹಿಳಾ ಕಾಂಗ್ರೆಸ್ ಪ್ರತಿಭಟನೆ

ಅ.ಶ. ಸುದ್ದಿ ಅಫಜಲಪುರ

**ಅಫಜಲಪುರ: ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಹಾಗೂ ಸಂಸದೆ ಕಂಗನಾ ರಣಾವತ್ ಅವರ ಹೇಳಿಕೆಗಳನ್ನು ಖಂಡಿಸಿ ತಾಲೂಕು ಮಹಿಳಾ ಬ್ಲಾಕ್ ಕಾಂಗ್ರೆಸ್ ನೇತೃತ್ವದಲ್ಲಿ ಮಹಿಳಾ ಕಾಂಗ್ರೆಸ್ ಕಾರ್ಯಕರ್ತೆಯರು ಪಟ್ಟಣದಲ್ಲಿ ಪ್ರತಿಭಟನೆ ನಡೆಸಿದರು.**

ಮಹಿಳಾ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷೆ ಮಂಜುಳಾ ಗಾಣೂರ ಅವರ ನೇತೃತ್ವದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ವೃತ್ತದಿಂದ ತಹಸೀಲ್ದಾರ್ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿ, ಬಳಿಕ ತಹಸೀಲ್ದಾರ್ ಮೂಲಕ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಲಾಯಿತು. ಈ ವೇಳೆ ಮಾತನಾಡಿದ ಮಂಜುಳಾ ಗಾಣೂರ,




ಜನಪ್ರತಿನಿಧಿಗಳು ಅಭಿವೃದ್ಧಿ ಕಾರ್ಯಗಳ ಮೂಲಕ ಗುರುತಿಸಿಕೊಳ್ಳಬೇಕೇ ಹೊರತು ಅವಹೇಳನಕಾರಿ ಹೇಳಿಕೆಗಳಿಂದಲ್ಲ ಎಂದು ತಿಳಿಸಿದರು. ಕೆಲವರು ಸಮಾಜದಲ್ಲಿ ದ್ವೇಷದ ವಾತಾವರಣ ಸೃಷ್ಟಿಸುವ ಹೇಳಿಕೆಗಳನ್ನು ನೀಡುತ್ತಿರುವುದು ಖಂಡನೀಯ ಎಂದರು.

ದೇಶದಲ್ಲಿ ಶಾಂತಿ ಹಾಗೂ ಸೌಹಾರ್ದತೆಯನ್ನು ಕಾಪಾಡುವ ಜವಾಬ್ದಾರಿ ರಾಜಕಾರಣಿಗಳ ಮೇಲಿದೆ. ಇಂತಹ ಹೇಳಿಕೆಗಳಿಗೆ ತಕ್ಷಣ ಕಡಿವಾಣ ಹಾಕಬೇಕು. ಪ್ರಲ್ಹಾದ್ ಜೋಶಿ ಮತ್ತು ಕಂಗನಾ ರಣಾವತ್ ಅವರು ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು. ಪ್ರತಿಭಟನಾಕಾರರು ಇಬ್ಬರ ವಿರುದ್ಧ ಸೂಕ್ತ ಕ್ರಮ ಕೈಗೊಂಡು, ಕೇಂದ್ರ ಸಚಿವ ಸ್ಥಾನದಿಂದ ವಜಾಗೊಳಿಸುವಂತೆ ಮನವಿಯಲ್ಲಿ ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಸಂಧ್ಯಾ ಪವಾರ ಸೇರಿದಂತೆ ಮಹಿಳಾ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತೆಯರು ಭಾಗವಹಿಸಿದ್ದರು.






# ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಅಂಗಡಿ ಭಸ್ಮ: ಬಡ ವ್ಯಾಪಾರಿಯ ಬದುಕಿಗೆ ಬೃಹತ್ ಆಘಾತ



ಅ.ಶ. ಸುದ್ದಿ ಜೇವರ್ಗಿ

**ಜೇವರ್ಗಿ: ತಾಲೂಕಿನ ಜೇರಟಗಿ ಗ್ರಾಮದ NH ರಸ್ತೆ ಹತ್ತಿರ (ಗಣಗಾಪುರ ಕ್ರಾಸ್) ಇರುವ ಶರಣಬಸ್ಸು ಎಸ್. ಪಟ್ಟಣಶೆಟ್ಟಿ ಅವರಿಗೆ ಸೇರಿದ 'ಶೆಟ್ಟಿ ಟಿ ಪಾಯಿಂಟ್' ಅಂಗಡಿ ಜುಲೈ 3ರ ರಾತ್ರಿ ಸುಮಾರು 11:50ರ ವೇಳೆಗೆ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಹೊತ್ತಿ ಉರಿದು ಸಂಪೂರ್ಣವಾಗಿ ಸುಟ್ಟು ಕರಕಲಾಗಿದೆ.**

ಅಗ್ನಿಶಾಮಕ ದಳದ ಮಾಹಿತಿಯ ಪ್ರಕಾರ, ಈ ಅಗ್ನಿ ಅವಘಡದಲ್ಲಿ ಟಿವಿ, ಫ್ರಿಜ್, ಸಿಸಿಟಿವಿ ಕ್ಯಾಮೆರಾ ಸೇರಿದಂತೆ ಎಲೆಕ್ಟ್ರಾನಿಕ್ ಸಾಮಗ್ರಿಗಳು ಮತ್ತು ರಾ ಮೆಟೀರಿಯಲ್ ಸೇರಿ ಅಂದಾಜು 4 ರಿಂದ 5 ಲಕ್ಷ ಮೌಲ್ಯದ ವಸ್ತುಗಳು ನಾಶವಾಗಿವೆ. ಕ್ಷಣಾರ್ಧದಲ್ಲಿ ಉಂಟಾದ ಈ ಬೆಂಕಿ ಅವಘಡವು ವ್ಯಾಪಾರಿಯ ಹಲವಾರು ವರ್ಷಗಳ ಪರಿಶ್ರಮವನ್ನು ಭಸ್ಮಗೊಳಿಸಿದೆ. ಈ ಘಟನೆ ಸ್ಥಳೀಯರ ಮನಸ್ಸನ್ನು ಕಲುಕಿದ್ದು, ಬಡ ವ್ಯಾಪಾರಿಯ ಜೀವನೋಪಾಯಕ್ಕೆ ದೊಡ್ಡ ಹೊಡೆತ ನೀಡಿದೆ. ದಿನನಿತ್ಯದ ಆದಾಯದ ಮೇಲೆ ಅವಲಂಬಿತನಾಗಿದ್ದ ಶರಣಬಸ್ಸು ಅವರ ಕುಟುಂಬ ಇದೀಗ ಸಂಕಷ್ಟಕ್ಕೆ ಸಿಲುಕಿದೆ.

ಅಂಗಡಿ ಮಾಲಿಕ ಶರಣಬಸ್ಸು ಹಾಗೂ ಗ್ರಾಮಸ್ಥರು, ಈ ನಷ್ಟಕ್ಕೆ ಸರ್ಕಾರ ಹಾಗೂ ಸಂಬಂಧಿತ ಅಧಿಕಾರಿಗಳು ತಕ್ಷಣ ಸ್ಪಂದಿಸಿ ಸೂಕ್ತ ಪರಿಹಾರ ನೀಡಬೇಕು ಎಂದು ಮಾಧ್ಯಮಗಳ ಮೂಲಕ ಮನವಿ ಮಾಡಿದ್ದಾರೆ. ಇಂತಹ ಸಂದರ್ಭಗಳಲ್ಲಿ ಸರ್ಕಾರದ ನೆರವು ಅವಶ್ಯಕವಾಗಿದ್ದು, ಬಡ ವ್ಯಾಪಾರಿಯ ಬದುಕು ಪುನಃ ಹಾದಿಗೆ ಬರಲು ಸಹಾಯ ಮಾಡಬೇಕೆಂಬುದು ಸ್ಥಳೀಯರ ಒತ್ತಾಯವಾಗಿದೆ.

## ಜಿಲ್ಲಾ ಆರೋಗ್ಯ ಇಲಾಖೆ: ವಿವಿಧ ಹುದ್ದೆಗಳ ನೇಮಕಾತಿಗೆ ಅರ್ಜಿ ಆಹ್ವಾನ

ಅ.ಶ. ಸುದ್ದಿ ಅಂಕೋಲಾ

**ಕೊಪ್ಪಳ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ಕಿರಿಯ ಪ್ರಯೋಗಶಾಲಾ ತಾಂತ್ರಿಕ ಅಧಿಕಾರಿ, ಫಾರ್ಮಸಿ ಅಧಿಕಾರಿ ಹಾಗೂ ಶುಶ್ರೂಷಾಧಿಕಾರಿ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ಭರ್ತಿ ಮಾಡಲಾಗುತ್ತಿದ್ದು, ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.**

ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳು www.koppal.nic.in ಜಿಲ್ಲಾ ವೆಬ್‌ಸೈಟ್‌ನಿಂದ ಅರ್ಜಿ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಿ, ಅಗತ್ಯ ಮೂಲ ದಾಖಲೆಗಳು ಹಾಗೂ ಎರಡು ಸ್ವಯಂ ದೃಢೀಕೃತ ನಕಲು ಪ್ರತಿಗಳೊಂದಿಗೆ ಆಗಸ್ಟ್ 7ರಂದು ಬೆಳಿಗ್ಗೆ 10 ರಿಂದ ಸಂಜೆ 4 ಗಂಟೆಯವರೆಗೆ ನಡೆಯಲಿರುವ ನೇರ ಸಂದರ್ಶನಕ್ಕೆ ಖುದ್ದಾಗಿ ಹಾಜರಾಗಬೇಕು. ಹುದ್ದೆಗಳ ಅರ್ಹತೆ, ನೇಮಕಾತಿ ಷರತ್ತುಗಳು ಹಾಗೂ ಇತರೆ ಸಂಪೂರ್ಣ ಮಾಹಿತಿಗಾಗಿ ಜಿಲ್ಲಾ ವೆಬ್‌ಸೈಟ್‌ನಲ್ಲಿರುವ ನೇಮಕಾತಿ ಅಧಿಸೂಚನೆಯನ್ನು ಪರಿಶೀಲಿಸುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕರ್ನಾಟಕ ಬಂದ್‌ಗೆ ಬೆಂಬಲ: ಅಭಿಷೇಕ ಬಾಲಾಜಿ

ಅ.ಶ. ಸುದ್ದಿ ಕಲಬುರಗಿ

**ಕಲಬುರಗಿ: ಕಾವೇರಿ ನೀರು ಬಿಡುಗಡೆ ವಿಚಾರವಾಗಿ ಆಗಸ್ಟ್ 13ರಂದು ಕನ್ನಡಪರ ಸಂಘಟನೆಗಳು ಕರೆ ನೀಡಿರುವ ಕರ್ನಾಟಕ ಬಂದ್‌ಗೆ ಸಂಪೂರ್ಣ ಬೆಂಬಲ ನೀಡಲಾಗುವುದು ಎಂದು ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ ಶೆಟ್ಟಿ ಬಣ) ಕಲ್ಯಾಣ ಕರ್ನಾಟಕ ಅಧ್ಯಕ್ಷ ಅಭಿಷೇಕ ಬಾಲಾಜಿ ತಿಳಿಸಿದ್ದಾರೆ.**



ಈ ಕುರಿತು ಪತ್ರಿಕಾ ಪ್ರಕಟಣೆ ಹೊರಡಿಸಿರುವ ಅವರು, ಕಾವೇರಿ ವಿಚಾರದಲ್ಲಿ ತಮಿಳುನಾಡು ರಾಜ್ಯವು ಪದೇಪದೇ ಕರ್ನಾಟಕಕ್ಕೆ ಅನ್ಯಾಯ ಮಾಡುತ್ತಿರುವುದು ಖಂಡನೀಯ. ಇದಕ್ಕೆ ತಕ್ಕ ಪ್ರತಿಕ್ರಿಯೆಯಾಗಿ ಕನ್ನಡಪರ ಸಂಘಟನೆಗಳೊಂದಿಗೆ ಸೇರಿ ಹೋರಾಟಕ್ಕೆ ನಮ್ಮ ಸಂಘಟನೆಯಿಂದ ಬೆಂಬಲ ನೀಡಲಾಗುತ್ತದೆ ಎಂದು ಹೇಳಿದರು. ಕಾವೇರಿ ನೀರು ನಮ್ಮದು, ಅದು ಕರ್ನಾಟಕದ ರೈತರು ಮತ್ತು ಜನರ ಹಕ್ಕು.

ರಾಜ್ಯದಲ್ಲಿ ಕುಡಿಯುವ ನೀರು ಹಾಗೂ ರೈತರಿಗೆ ನೀರಿನ ತೀವ್ರ ಸಮಸ್ಯೆ ಎದುರಾಗಿರುವ ಸಂದರ್ಭದಲ್ಲಿ ತಮಿಳುನಾಡಿಗೆ ನೀರು ಬಿಡುಗಡೆ ಮಾಡುವುದನ್ನು ವಿರೋಧಿಸುತ್ತೇವೆ ಎಂದು ಹೇಳಿದರು. ಕಾವೇರಿ ಜಲ ವಿವಾದದಲ್ಲಿ ಪ್ರಧಾನಮಂತ್ರಿಗಳು ಮಧ್ಯಸ್ಥಿಕೆ ವಹಿಸಬೇಕು. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ರಾಜ್ಯದ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ದೃಢ ನಿರ್ಧಾರ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಕರ್ನಾಟಕ ರಕ್ಷಣಾ ವೇದಿಕೆ ಹಲವು ಸಮಾಜಪರ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದು, ಕನ್ನಡದ ನೆಲ–ಜಲ ವಿಚಾರದಲ್ಲಿ ಸದಾ ಕನ್ನಡದ ಪರ ನಿಲ್ಲಲಿದೆ. ರಾಜ್ಯದ ಹಕ್ಕುಗಳಿಗೆ ಧಕ್ಕೆಯಾಗುವ


ಅಜಾತ ಶತ್ರು
ದಿನಪತ್ರಿಕೆಯನ್ನು
ತಪ್ಪದೇ ಓದಿರಿ.


AJATHA SHATHRU KANNADA DAILY MORNING Editor, Printer, Publisher, & Owned by : PRADEEP KUMAR H.No. 2/77/1, Godi nilaya, Halli street, 1st ward,Mainahalli, Koppal-583238, Dist : Koppal- Karnataka Printed at : Goditechnologies, H.No. 2/77/1, Godi nilaya, Halli street, 1st ward,Mainahalli, Koppal-583238, Karnataka